ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ
ಸೋಮವಾರ, ಮಾರ್ಚ್ 01, 2021

ಸಂಪುಟ : 47 ಸಂಚಿಕೆ : 301 ☎ 254736 91642 99999 RNI No: 27369/75, KA/SK/CTA-275/2018-2020. O/P @ J.D. Circle P.O. ಪುಟ : 6 ರೂ : 4.00 www.janathavani.com janathavani@mac.com



# 'ವಿದ್ಯಾರ್ಥಿ ದೇವೋಭವ' ಎಂದ ಲಿಂ. ಜಯದೇವ ಶ್ರೀ

## ಶರಣ ಸಂಸ್ಕೃತಿ ಉತ್ಸವದಲ್ಲಿ ಡಾ.ಶ್ರೀ ಶಿವಮೂರ್ತಿ ಮುರುಘಾ ಶರಣರು

ದಾವಣಗೆರೆ, ಫೆ. 28 - ವಿದ್ಯಾರ್ಥಿ ದೇವೋಭವ ಎಂದ ಏಕೈಕ ಜಗದ್ಗುರು ಲಿಂ.ಶ್ರೀ ಜಯದೇವ ಮುರುಘರಾಜೇಂದ್ರ ಮಹಾಸ್ವಾಮೀಜಿ ಎಂದು ಚಿತ್ರದುರ್ಗ ಮುರುಘರಾಜೇಂದ್ರ ಬೃಹನ್ಮಠದ ಶೂನ್ಯ ಪೀಠಾಧ್ಯಕ್ಷರಾದ ಡಾ. ಶ್ರೀ ಶಿವಮೂರ್ತಿ ಮುರುಘಾ ಶರಣರು ಹೇಳಿದರು.

ನಗರದ ಶಿವಯೋಗಿ ಮಂದಿರದ ಆವರಣದಲ್ಲಿ ಭಾನುವಾರ ಸಂಜೆ ಹಮ್ಮಿಕೊಳ್ಳಲಾಗಿದ್ದ ಲಿಂ. ಶ್ರೀ ಜಯದೇವ ಮುರುಘರಾಜೇಂದ್ರ ಮಹಾಸ್ವಾಮಿಗಳವರ 64ನೇ ಸ್ಮರಣೋತ್ಸವ ಹಾಗೂ ಜಯದೇವ ಶ್ರೀ ಮತ್ತು ಶೂನ್ಯ ಪೀಠ ಪ್ರಶಸ್ತಿ ಪ್ರದಾನ ಸಮಾರಂಭದ ಅಧ್ಯಕ್ಷತೆ ವಹಿಸಿ ಶರಣರು ಆಶೀರ್ವಚನ ನೀಡಿದರು.

ಆಚಾರ್ಯ ದೇವೋಭವ ಎನ್ನುತ್ತಿದ್ದ ಕಾಲದಲ್ಲಿ ಆಚಾರ್ಯ ಪರಂಪರೆಯನ್ನು ಮೀರಿಸುವಂತೆ ಜಯದೇವ ಶ್ರೀಗಳು ಶೈಕ್ಷಣಿಕ ಕ್ರಾಂತಿ ಮಾಡಿದರು.

**ಸಾಹಿತಿ ಡಾ.ಕೆ. ಮರುಳಸಿದ್ದಪ್ಪ ಅವರಿಗೆ 'ಜಯದೇವ ಶ್ರೀ' ಪ್ರಶಸ್ತಿ, ಶ್ರೀಮತಿ ರೂಪಾ ಡಿ.ಮೌದ್ಗಿಲ್ ಅವರಿಗೆ 'ಶೂನ್ಯಪೀಠ ಅಕ್ಕನಾಗಮ್ಮ'ಪ್ರಶಸ್ತಿ, ಬಸವರಾಜಸ್ವಾಮಿ ಅವರಿಗೆ 'ಶೂನ್ಯ ಪೀಠ ಅಲ್ಲಮ' ಪ್ರಶಸ್ತಿ, ಪ್ರೊ.ಹೆಚ್.ಲಿಂಗಪ್ಪ ಅವರಿಗೆ 'ಶೂನ್ಯಪೀಠ ಚನ್ನಬಸವ' ಪ್ರಶಸ್ತಿ ಪ್ರದಾನ**

ಧರ್ಮ ಪೀಠಗಳು ಕೇವಲ ಧಾರ್ಮಿಕ ಕ್ಷೇತ್ರಕ್ಕೆ ಸೀಮಿತವಾಗಿದ್ದ ಸಂದರ್ಭದಲ್ಲಿ ಜಯದೇವ ಶ್ರೀಗಳು ಧಾರ್ಮಿಕ ನೇತಾರರಾಗಿ, ನಾಡಿನಾದ್ಯಂತ ಜಯದೇವ ಪ್ರಸಾದ ನಿಲಯಗಳನ್ನು ಸ್ಥಾಪಿಸುವ ಮೂಲಕ ಲಕ್ಷೋಪಲಕ್ಷ ವಿದ್ಯಾರ್ಥಿಗಳ ಬದುಕು ಕಟ್ಟಿಕೊಳ್ಳಲು ನೆರವಾದ ಧೀಮಂತ ಜಗದ್ಗುರು ಎಂದು ಬಣ್ಣಿಸಿದರು.

ಜಾತಿ-ಉಪಜಾತಿಗಳ ಹೆಸರಿನಲ್ಲಿ ಸಮಾಜ ವಿಭಜನೆಯಾಗುತ್ತಿರುವುದು 21ನೇ ಶತಮಾನದ ಅನಾರೋಗ್ಯಕರ ಬೆಳವಣಿಗೆಯಾಗಿದೆ. ಬಸವಣ್ಣನ ಕಾಲ ಜೋಡಣೆಯ ಕಾಲವಾಗಿದ್ದರೆ, 21ನೇ ಶತಮಾನ ವಿಭಜನೆಯ ಕಾಲವಾಗಿದೆ. ಜಾತಿ, ಧರ್ಮದ, ಮೀಸಲಾತಿ ಹೆಸರಿನಲ್ಲಿ ಸಮಾಜ ವಿಭಜನೆಯಾಗುವ ಸಂದಿಗ್ಧ ಸ್ಥಿತಿ ಇಂದು ನಿರ್ಮಾಣವಾಗಿದೆ ಎಂದು ಶರಣರು ಆತಂಕ ವ್ಯಕ್ತಪಡಿಸಿದರು.

ಮಠವನ್ನೇ ಜನರ ಬಳಿ ಕೊಂಡೊಯ್ದ ಅಪೂರ್ವ ಸಾಧಕರು ಜಯದೇವ ಶ್ರೀಗಳಾಗಿದ್ದರು. ಅವರದು ಸಂಚಾರದ ಬದುಕಾಗಿತ್ತು. ವರ್ಷದಲ್ಲಿ 11 ತಿಂಗಳು ಹಳ್ಳಿ, ಪಟ್ಟಣಗಳನ್ನು ಸುತ್ತಾಡಿ, ಕೇವಲ ಒಂದು ತಿಂಗಳು ಮಾತ್ರ (2ನೇ ಪುಟಕ್ಕೆ)

# ಇಂದಿನಿಂದ ಹಿರಿಯ ನಾಗರಿಕರಿಗೆ ಲಸಿಕೆ

## ನಗರಗಳಲ್ಲಿ ಆನ್‌ಲೈನ್, ಹಳ್ಳಿಗಳಲ್ಲಿ ಆಫ್‌ಲೈನ್ ಮೂಲಕ ನೋಂದಣಿ

ಬೆಂಗಳೂರು, ಫೆ. 28 – 60 ವರ್ಷಕ್ಕೂ ಹೆಚ್ಚಿನ ಹಿರಿಯ ನಾಗರಿಕರು ಹಾಗೂ ಸಹ ಅಸ್ವಸ್ಥತೆ ಹೊಂದಿರುವವರು ರಾಜ್ಯದ ಎಲ್ಲಾ ಜಿಲ್ಲಾ ಹಾಗೂ ತಾಲ್ಲೂಕು ಮಟ್ಟದ ಆಸ್ಪತ್ರೆಗಳಲ್ಲಿ ಮತ್ತು ಪ್ರತಿ ಜಿಲ್ಲೆಯಲ್ಲಿ ಗುರುತಿಸಲಾದ ಎರಡು ಖಾಸಗಿ ಆಸ್ಪತ್ರೆಗಳಲ್ಲಿ ಸೋಮವಾರದಿಂದ ಕೊರೊನಾ ಲಸಿಕೆ ಪಡೆಯಬಹುದು ಎಂದು ರಾಜ್ಯ ಸರ್ಕಾರ ಪ್ರಕಟಿಸಿದೆ.

60 ವರ್ಷಕ್ಕೂ ಹೆಚ್ಚಿನವರು ಹಾಗೂ 45 ವರ್ಷಕ್ಕೂ ಮೀರಿದ ಸಹ ಅಸ್ವಸ್ಥತೆಗಳನ್ನು ಹೊಂದಿರುವವರು ಅಗತ್ಯ ದಾಖಲೆಗಳ ಜೊತೆಗೆ ಲಸಿಕೆ ಪಡೆಯಬಹುದು. ಸಹ ಅಸ್ವಸ್ಥತೆ ಹೊಂದಿರುವವರು ನೋಂದಾಯಿತ ವೈದ್ಯರಿಂದ ಪ್ರಮಾಣ ಪತ್ರ ಪಡೆದಿರಬೇಕಿದೆ.

ಆರಂಭಿಕ ಹಂತದಲ್ಲಿ ಎಲ್ಲಾ ತಾಲ್ಲೂಕು ಆಸ್ಪತ್ರೆಗಳು, ಜಿಲ್ಲಾ ಆಸ್ಪತ್ರೆಗಳು ಹಾಗೂ ಪ್ರತಿ ಜಿಲ್ಲೆಯಲ್ಲಿ ಎರಡು ಖಾಸಗಿ ಆಸ್ಪತ್ರೆಗಳ ಮೂಲಕ ಲಸಿಕೆ ನೀಡಲಾಗುವುದು. ಬೆಂಗಳೂರಿನಲ್ಲಿ ಪ್ರಮುಖ ಆಸ್ಪತ್ರೆಗಳು ಹಾಗೂ 18 ಖಾಸಗಿ ಆರೋಗ್ಯ ಕೇಂದ್ರಗಳ ಮೂಲಕ ಲಸಿಕೆ ನೀಡಲಾಗುವದು ಎಂದು ರಾಜ್ಯ ಆರೋಗ್ಯ ಇಲಾಖೆ ತಿಳಿಸಿದೆ.

ನಗರ ಪ್ರದೇಶಗಳಲ್ಲಿ ಪ್ರಸಕ್ತ ಆನ್‌ಲೈನ್ ಮೂಲಕ ನೋಂದಾಯಿಸುವವರು ಮಾತ್ರ ಲಸಿಕೆ ಪಡೆಯಲಿದ್ದಾರೆ. ಗ್ರಾಮೀಣ ಭಾಗದಲ್ಲಿ ಆನ್‌ಲೈನ್ ಹಾಗೂ ನೇರ ನೋಂದಣಿ ಎರಡಕ್ಕೂ ಅವಕಾಶ ಕಲ್ಪಿಸಲಾಗಿದೆ. ಮುಂದಿನ ದಿನಗಳಲ್ಲಿ ಇತರೆ ವಿಧಾನಗಳ ಮೂಲಕ ಹೆಸರು ನೋಂದಾಯಿಸಿಕೊಳ್ಳಲು ಅವಕಾಶ ಕಲ್ಪಿಸಲಾಗುವುದು.

ಸೋಮವಾರ, ಬುಧವಾರ, ಶುಕ್ರವಾರ ಹಾಗೂ ಶನಿವಾರಗಳಂದು ಸರ್ಕಾರಿ ಆಸ್ಪತ್ರೆಗಳಲ್ಲಿ ಲಸಿಕೆ ನೀಡಲಾಗುವುದು. ಖಾಸಗಿ ಆಸ್ಪತ್ರೆಗಳಲ್ಲಿ ವಾರದ ಎಲ್ಲ ಕಾರ್ಯನಿರ್ವಹಣೆ ದಿನಗಳಲ್ಲಿ ಲಸಿಕೆ ನೀಡಲಾಗುವುದು. ಮಧ್ಯಾಹ್ನ 12ರಿಂದ ಸಂಜೆ 5ರವರೆಗೆ ಲಸಿಕೆ ನೀಡಲಾಗುವುದು. ನಂತರದಲ್ಲಿ ಈ ಸಮಯವನ್ನೂ ಬದಲಿಸಬಹುದಾಗಿದೆ.

ಪ್ರಸಕ್ತ ದಿನವೊಂದಕ್ಕೆ ಗರಿಷ್ಠ 200 ಜನರಿಗೆ ಮಾತ್ರ ಲಸಿಕೆ ನೀಡಲಾಗುವುದು. ಮೊದಲು ಬಂದವರಿಗೆ ಆದ್ಯತೆಯ ಮೇಲೆ ಲಸಿಕೆ (2ನೇ ಪುಟಕ್ಕೆ)

# ಲಸಿಕೆ ದರ ಕಡಿಮೆಗೆ ಆಕ್ಷೇಪ

## ಸರ್ಕಾರದಿಂದ ಸಬ್ಸಿಡಿ ಸಿಗುವ ಸಾಧ್ಯತೆ

ನವದೆಹಲಿ ಫೆ. 28 – ಕೇಂದ್ರ ಸರ್ಕಾರ 60 ವರ್ಷದ ಮೇಲಿನವರು ಹಾಗೂ 45 ವರ್ಷಕ್ಕೂ ಹೆಚ್ಚಿನ ಸಹ ಅಸ್ವಸ್ಥತೆ ಹೊಂದಿರುವವರು ಖಾಸಗಿ ಆಸ್ಪತ್ರೆಯಲ್ಲಿ ಲಸಿಕೆ ಪಡೆಯಲು 250 ರೂ. ನಿಗದಿ ಪಡಿಸಿರುವುದು ತೀರಾ ಕಡಿಮೆಯಾಗಿದೆ ಎಂದು ಉದ್ಯಮಿ ಕಿರಣ್ ಮಜುಮ್ದಾರ್ ಷಾ ಆಕ್ಷೇಪಿಸಿದ್ದಾರೆ.

ಈ ನಡುವೆ, ಸರ್ಕಾರ ಲಸಿಕೆಗೆ ಸಬ್ಸಿಡಿ ನೀಡುವ ಸಾಧ್ಯತೆ ಇದೆ ಎನ್ನಲಾಗುತ್ತಿದೆ. ಆದರೆ, ಎಷ್ಟು ಸಬ್ಸಿಡಿ ನೀಡಲಾಗುವುದು ಎಂಬುದನ್ನು ಇನ್ನೂ ಪ್ರಕಟಿಸಿಲ್ಲ. ಲಸಿಕೆ ಉತ್ಪಾದಿಸುವ ಎಸ್.ಐ.ಐ. ಹಾಗೂ ಭಾರತ್ ಬಯೋಟೆಕ್‌ಗಳು ಈ ಬಗ್ಗೆ ಯಾವುದೇ ಹೇಳಿಕೆ ನೀಡಿಲ್ಲ.

ಸರ್ಕಾರಿ ಆಸ್ಪತ್ರೆಗಳಲ್ಲಿ ಲಸಿಕೆ ಸಂಪೂರ್ಣ ಉಚಿತವಾಗಿದೆ. ಆದರೆ, ಖಾಸಗಿ ಆಸ್ಪತ್ರೆಯಲ್ಲಿ ಲಸಿಕೆ ಪಡೆಯಲು ಬಯಸುವವರು 250 ರೂ. ಪಾವತಿಸಬೇಕಿದೆ.

ಈ ಬಗ್ಗೆ ಟ್ವೀಟ್ ಮಾಡಿರುವ ಬಯೋಕಾನ್ ಮುಖ್ಯಸ್ಥೆ ಕಿರಣ್ ಮಜುಮ್ದಾರ್ ಷಾ, ವಿಶ್ವ ಆರೋಗ್ಯ ಸಂಘಟನೆಯೇ ಪ್ರತಿ ಡೋಸ್‌ಗೆ 3 ಡಾಲರ್ ಎಂದು ನಿಗದಿ ಪಡಿಸಿದೆ. ಹೀಗಿರುವಾಗ ಅದನ್ನೂ ಮೀರಿ 2 ಡಾಲರ್‌ಗಳಿಗೆ ಏಕೆ ಇಳಿಸಬೇಕು? ಈ ದರದಲ್ಲಿ ಲಸಿಕೆ ನಿರ್ವಹಿಸಲು ಸಾಧ್ಯವಾಗುವುದಿಲ್ಲ. ಲಸಿಕಾ ಉದ್ಯಮಕ್ಕೆ ಉತ್ತೇಜನ ನೀಡುವ ಬದಲು ಕುಸಿಯುವಂತೆ ಮಾಡಲಾಗುತ್ತಿದೆ ಎಂದು ಆಕ್ಷೇಪಿಸಿದ್ದಾರೆ.

ಸರ್ಕಾರಿ ಆಸ್ಪತ್ರೆಗಳಲ್ಲಿ ಉಚಿತವಾಗಿ ಲಸಿಕೆ ನೀಡುವುದಕ್ಕೆ ಆಕ್ಷೇಪವಿಲ್ಲ ಎಂದಿರುವ ಷಾ, ಖರೀದಿಸುವ ಸಾಮರ್ಥ್ಯ ಇರುವವರು ಹಣ ಪಾವತಿಸಬೇಕು ಎಂದಿದ್ದಾರೆ.

ಲಸಿಕೆಗೆ ಇಷ್ಟು ಕಡಿಮೆ ದರ ನಿಗದಿ ಪಡಿಸಿದರೆ ಯಾವುದೇ ಕಂಪನಿ ಭಾರತಕ್ಕೆ ಲಸಿಕೆ ಪೂರೈಸುವುದಿಲ್ಲ. ನೊವವ್ಯಾಕ್ಸ್ ಅಥವಾ ಜೆ ಅಂಡ್ ಜೆ, ಅಷ್ಟೇ ಏಕೆ ಸ್ಪುಟ್ನಿಕ್‌ಗೂ ಸಹ ಈ ದರದಲ್ಲಿ ಪೂರೈಕೆ ಸಾಧ್ಯವಾಗುವುದಿಲ್ಲ ಎಂದವರು ಹೇಳಿದ್ದಾರೆ.

ಸರ್ಕಾರ ಲಸಿಕೆಗೆ 250 ರೂ. ನಿಗದಿ (2ನೇ ಪುಟಕ್ಕೆ)

# ಕುಂಬಾರರು ಬಡವರಾಗಿದ್ದರೂ ಸ್ವಾಭಿಮಾನದಲ್ಲಿ ಶ್ರೀಮಂತರು



## ಸರ್ವಜ್ಞ ಸಮುದಾಯ ಭವನ/ ವಿದ್ಯಾರ್ಥಿ ನಿಲಯ ಉದ್ಘಾಟನಾ ಸಮಾರಂಭದಲ್ಲಿ ದೂಡಾ ಅಧ್ಯಕ್ಷ ರಾಜನಹಳ್ಳಿ ಶಿವಕುಮಾರ್

ದಾವಣಗೆರೆ, ಫೆ. 28 – ಆಧುನಿಕತೆಯ ಕಾರಣದಿಂದಾಗಿ ಮಡಿಕೆಗಳು ಮೂಲೆಗುಂಪಾಗಿ ಕುಂಬಾರ ಸಮುದಾಯ ಬಡವಾಗಿದ್ದರೂ, ಸ್ವಾಭಿಮಾನದಲ್ಲಿ ಸದಾ ಶ್ರೀಮಂತವಾಗಿದೆ ಎಂದು ದೂಡಾ ಅಧ್ಯಕ್ಷ ರಾಜನಹಳ್ಳಿ ಶಿವಕುಮಾರ್ ತಿಳಿಸಿದ್ದಾರೆ.

ದಾವಣಗೆರೆ ಜಿಲ್ಲಾ ಕುಂಬಾರರ ಸಂಘದ ವತಿಯಿಂದ ನಗರದಲ್ಲಿ ಆಯೋಜಿಸಲಾಗಿದ್ದ ಸರ್ವಜ್ಞ ಸಮುದಾಯ ಭವನ/ವಿದ್ಯಾರ್ಥಿ ನಿಲಯದ ಉದ್ಘಾಟನಾ ಸಮಾರಂಭದ ಉದ್ಘಾಟನೆ ನೆರವೇರಿಸಿ ಅವರು ಮಾತನಾಡುತ್ತಿದ್ದರು.

ನಗರದ ದುರ್ಗಾಂಬಿಕಾ ಜಾತ್ರಾ ಮಹೋ ತ್ಸವದಲ್ಲಿ ಕುಂಬಾರರ ಮಡಿಕೆಯಿಂದಲೇ ಪೂಜಾ ವಿಧಿ ವಿಧಾನಗಳು ಆರಂಭವಾಗುತ್ತವೆ. ಇದೇ ಪದ್ಧತಿ ಎಲ್ಲ ಜಾತ್ರೆಗಳಲ್ಲೂ ಇದೆ. ಈ ರೀತಿ ಕುಂಬಾರರು ಹಿಂದೂ ಸಮುದಾಯದಲ್ಲಿ ಮಾನ್ಯತೆ ಪಡೆದಿದ್ದಾರೆ ಎಂದರು.

ಕುಂಬಾರರ ಸಂಖ್ಯೆ ಕಡಿಮೆ ಇದ್ದರೂ ಅವರು ಕಡೆಗಣಿಸಿದ ಭಾವನೆ ಹೊಂದಬಾರದು. ಜಾತಿಗಳು ಕೇವಲ ವೃತ್ತಿಯಿಂದ ಬಂದಂಥವು. ಇಡೀ ಹಿಂದೂ ಸಮಾಜ ಒಗ್ಗಟ್ಟಾಗಿದೆ ಎಂದವರು ಅಭಿಪ್ರಾಯ ಪಟ್ಟರು.

ಈಗ ಕುಂಬಾರ ಸಮುದಾಯಕ್ಕೆ ನೀಡಿ ರುವ ಜಾಗ ಚಿಕ್ಕದಾಗಿದೆ. ದೊಡ್ಡ ಜಾಗವನ್ನು ದೂಡಾ ವತಿಯಿಂದ ನೀಡಬೇಕೆಂಬ ಬೇಡಿಕೆಯನ್ನು ಪರಿಗಣಿಸುವುದಾಗಿ ಹೇಳಿದ ಶಿವಕುಮಾರ್, ನಿವೇಶನ ಕೊಡಿಸುವ ಜೊತೆಗೆ ಪ್ರಸ್ತಾವನೆಯನ್ನು ಸಂಪುಟದ ಮುಂದಿಟ್ಟು ಕಡಿಮೆ ಬೆಲೆಗೆ ನಿವೇಶನ ಕೊಡಿಸುವ ಪ್ರಯತ್ನ ಮಾಡುವುದಾಗಿ ಹೇಳಿದರು.

ಆರ್ಥಿಕವಾಗಿ ಬಲಿಷ್ಠರಾಗಲು ಈಗ (2ನೇ ಪುಟಕ್ಕೆ)

# ಇಸ್ರೋ ವಾಣಿಜ್ಯ ವಿಭಾಗದ ಉಡಾವಣೆ ಯಶಸ್ವಿ

## ಪ್ರಧಾನಿ ಚಿತ್ರದೊಂದಿಗೆ ಭಗವದ್ಗೀತೆ ಪ್ರತಿ ಬಾಹ್ಯಾಕಾಶಕ್ಕೆ

ಶ್ರೀಹರಿಕೋಟ, ಫೆ. 28 – ಇಸ್ರೋದ ವಾಣಿಜ್ಯ ವಿಭಾಗದ ಎನ್.ಎಸ್.ಐ.ಎಲ್. ತನ್ನ ಮೊದಲ ಉಡಾವಣೆಯನ್ನು ಯಶಸ್ವಿಯಾಗಿ ನೆರವೇರಿಸಿದ್ದು, ಬ್ರೆಜಿಲ್‌ನ ಭೂ ಸರ್ವೇಕ್ಷಣಾ ಉಪಗ್ರಹ ಅಮೆಜೋನಿಯಾ -1 ಹಾಗೂ ಇತರೆ 18 ಉಪಗ್ರಹಗಳನ್ನು ಯಶಸ್ವಿಯಾಗಿ ಕಕ್ಷೆಗೆ ಸೇರಿಸಿದೆ. ಇದರಲ್ಲಿ ವಿದ್ಯಾರ್ಥಿಗಳು ರೂಪಿಸಿರುವ ಐದು ಉಪಗ್ರಹಗಳೂ ಸೇರಿವೆ. ಪೋಲಾರ್ ರಾಕೆಟ್ ಮೂಲಕ ಉಡಾವಣೆ ನೆರವೇರಿಸಲಾಗಿದೆ.

ಪಿಎಸ್‌ಎಲ್‌ವಿ - ಸಿ51 ಬೆಳಿಗ್ಗೆ 10.24ರ ಸಮಯದಲ್ಲಿ ಸತೀಶ್ ಧವನ್ ಬಾಹ್ಯಾಕಾಶ ಕೇಂದ್ರದಿಂದ ನಿಖರ ಉಡಾವಣೆ ನೆರವೇರಿಸಲಾಯಿತು. ಇದು ಪ್ರಸಕ್ತ ವರ್ಷದಲ್ಲಿ ಇಸ್ರೋದ ಮೊದಲ ಉಡಾವಣೆಯೂ ಆಗಿದೆ.

ಚೆನ್ನೈನ ಸ್ಪೇಸ್ ಕಿಡ್ಸ್ ಇಂಡಿಯಾ (ಎಸ್.ಕೆ.ಐ.) ರೂಪಿಸಿರುವ ಸತೀಶ್ ಧವನ್ ಉಪಗ್ರಹವನ್ನೂ (ಎಸ್.ಡಿ. - ಸ್ಯಾಟ್) ಸಹ ಇದೇ ವೇಳೆ ಉಡಾವಣೆ ಮಾಡಲಾಗಿದೆ. ಇದರಲ್ಲಿ ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರ ಚಿತ್ರವನ್ನು ಅಚ್ಚೊತ್ತಲಾಗಿದೆ ಹಾಗೂ ಭಗವದ್ಗೀತೆಯ ಡಿಜಿಟಲ್ ಪ್ರತಿಯನ್ನು ಇರಿಸಲಾಗಿದೆ.

ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ಆತ್ಮನಿರ್ಭರ್ ಅಭಿಯಾನ ನಡೆಸಿರುವುದು ಹಾಗೂ ಬಾಹ್ಯಾಕಾಶ (2ನೇ ಪುಟಕ್ಕೆ)



ಕುಮಾರ ಪಟ್ಟಣಂ ಪುಣ್ಯ ಕೋಟಿ ಮಠದಿಂದ ತುಂಗಭದ್ರಾ ನದಿ ತೀರದಲ್ಲಿರುವ ಹಮ್ಮಿಕೊಂಡಿದ್ದ ತುಂಗಾರತಿ ಕಾರ್ಯಕ್ರಮ

# ತುಂಗಭದ್ರಾ ನದಿ ತೀರದಲ್ಲಿ ಸಂಭ್ರಮದ 'ತುಂಗಾರತಿ'

## ತುಂಗಾರತಿ ಮೂಲಕ ಈ ಭಾಗದ ಜನರಿಗೆ ಗಂಗಾರತಿಯ ಪರಿಕಲ್ಪನೆ : ಆದಿಚುಂಚನಗಿರಿ ಸ್ವಾಮೀಜಿ ಮೆಚ್ಚುಗೆ

**ಜಿಗಳಿ ಪ್ರಕಾಶ್**

ಕುಮಾರಪಟ್ಟಣಂ, ಫೆ.28- ಇಲ್ಲಿನ ತೆಪ್ಪೋತ್ಸವ ಪುಣ್ಯಕೋಟಿ ಮಠದ ವತಿಯಿಂದ 2ನೇ ಬಾರಿಗೆ ಹಮ್ಮಿಕೊಂಡಿದ್ದ 'ತುಂಗಾರತಿ' ಕಾರ್ಯಕ್ರಮ ಎಲ್ಲರ ಮನಸೂರೆಗೊಂಡಿತು.

ಉತ್ತರ ಭಾರತದ ಐತಿಹಾಸಿಕ ಗಂಗಾನದಿ ತೀರದಲ್ಲಿ ಜರುಗುವ 'ಗಂಗಾರತಿ' ಮಾದರಿಯಲ್ಲಿ ತುಂಗಭದ್ರಾ ನದಿ ತೀರದಲ್ಲಿ ನಡೆದ 'ತುಂಗಾರತಿ' ನೋಡಲು ಜನ ನಾನಾ ಭಾಗಗಳಿಂದ ಆಗಮಿಸಿದ್ದರು.

'ತುಂಗಾರತಿ' ಕಾರ್ಯಕ್ರಮ ಉದ್ಘಾಟಿಸಿದ ಆದಿಚುಂಚನಗಿರಿ ಮಠದ ಡಾ. ನಿರ್ಮಲಾನಂದ ಸ್ವಾಮೀಜಿ ಅವರು, ಪುಣ್ಯಕೋಟಿ ಮಠದ ಶ್ರೀಗಳು ಇಂತಹ ಅದ್ಭುತ ಕಾರ್ಯಕ್ರಮ ಏರ್ಪಡಿಸುವ ಮೂಲಕ ಗಂಗಾನದಿ ತೀರದಲ್ಲಿ ನಿತ್ಯ ನಡೆಯುವ ಗಂಗಾರತಿಯನ್ನು ಈ ತುಂಗಭದ್ರಾ ನದಿ ತೀರದಲ್ಲಿ ತುಂಗಾರತಿ ಮಾಡುವ ಮೂಲಕ ಈ ಭಾಗದ ಜನರಿಗೆ ಗಂಗಾರತಿಯ ಪರಿಕಲ್ಪನೆ ಮಾಡಿಕೊಟ್ಟಿದ್ದಾರೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.


ದೇಶದ ಸಮೃದ್ಧಿಗೆ ನದಿಗಳು, ಪ್ರಕೃತಿ ಬಹಳ ಮುಖ್ಯವಾಗಿವೆ. ಅಂತಹ ನದಿಗಳನ್ನು, ಪ್ರಕೃತಿಯನ್ನು ನಾವು ಸ್ವಚ್ಛವಾಗಿ ಇಟ್ಟುಕೊಳ್ಳುವ ಮೂಲಕ ಪ್ರೀತಿಸಿ, ಪೂಜಿಸಬೇಕೆಂದ ಶ್ರೀಗಳು, ಹರಿಯುವ ನದಿಗಳು ಶುದ್ಧವಾಗಿದ್ದರೆ ದೇಶ ಶುದ್ಧವಾಗಿರುತ್ತದೆ. ದೇಹದ ಒಳಗೆ ಹರಿಯುವ ರಕ್ತ ಶುದ್ಧಿಯಾಗಿದ್ದರೆ ಆರೋಗ್ಯ ಚನ್ನಾಗಿರುತ್ತದೆ ಎಂಬುದನ್ನು ಎಲ್ಲರೂ ಅರ್ಥ ಮಾಡಿಕೊಳ್ಳಬೇಕೆಂದರು.

ಆಧುನಿಕ ವಿಜ್ಞಾನಗಳ ಆವಿಷ್ಕಾರದಿಂದ ಜಗತ್ತು ವಿಕಾಸಗೊಳ್ಳುತ್ತಿದ್ದರೂ ಮನುಷ್ಯ ಕರ್ಮ, ಉಪಾಸನೆ, ಭಕ್ತಿ ಎಂಬ ವಿಚಾರಗಳಿಂದ ವಿಕಾಸಗೊಂಡಾಗ ಮಾತ್ರ ಅವನಲ್ಲಿ ಬದಲಾವಣೆ ಸಾಧ್ಯ. ಈ ನಿಟ್ಟಿನಲ್ಲಿ ಪುಣ್ಯಕೋಟಿ ಮಠದ ಶ್ರೀಗಳು ಕಾರ್ಯನಿರ್ವಹಿಸುತ್ತಿರುವುದು ತುಂಬಾ ಸಂತೋಷ ತಂದಿದೆ ಎಂದು ಆದಿಚುಂಚನಗಿರಿ ಶ್ರೀಗಳು ಹೇಳಿದರು.

ಈ ಸಂದರ್ಭದಲ್ಲಿ ಕರ್ನಾಟಕ ರಕ್ಷಣಾ ವೇದಿಕೆಯ ರಾಜ್ಯಾಧ್ಯಕ್ಷ ಟಿ.ಎ. ನಾರಾಯಣ ಗೌಡ ಅವರಿಗೆ 'ಕನ್ನಡದ ಕುಲಸಾರ್ವಭೌಮ' ಪ್ರಶಸ್ತಿ ನೀಡಿ ಗೌರವಿಸಲಾಯಿತು.

ಶ್ರೀಶೈಲ ಪೀಠದ ಡಾ. ಚನ್ನಸಿದ್ಧರಾಮ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ, ರಾಜನಹಳ್ಳಿ ವಾಲ್ಮೀಕಿ (2ನೇ ಪುಟಕ್ಕೆ)


ನಿವೃತ್ತ ಕಾರ್ಯಪಾಲಕ ಅಭಿಯಂತರರಾದ
ಶ್ರೀ ಜಿ.ವಿ. ನಾಯ್ಕ ನಿಧನ



ದಾವಣಗೆರೆ ಎಸ್.ಎಸ್. 'ಎ' ಬ್ಲಾಕ್, ಎಸ್.ಎಸ್. ಮಾಲ್ ಹಿಂಭಾಗದ ವಾಸಿ ನಿವೃತ್ತ ಕಾರ್ಯಪಾಲಕ ಅಭಿಯಂತರರಾದ ಶ್ರೀ ಜಿ.ವಿ. ನಾಯ್ಕ ಅವರು ದಿನಾಂಕ 28.02.2021ರ ಭಾನುವಾರ ಬೆಳಿಗ್ಗೆ 8.05 ಕ್ಕೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ 83 ವರ್ಷ ವಯಸ್ಸಾಗಿತ್ತು. ಪತ್ನಿ, ಮಕ್ಕಳು, ಸೊಸೆಯಂದಿರು, ಅಳಿಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 28.02.2021ರ ಭಾನುವಾರ ಸಂಜೆ ಮೃತರ ಸ್ವಗ್ರಾಮವಾದ ಭರಮಸಾಗರ ಸಮೀಪದ ಬೇವಿನಹಳ್ಳಿಯ ಮೃತರ ಜಮೀನಿನಲ್ಲಿ ನೆರವೇರಿಸಲಾಯಿತು.

ದುಃಖತಪ್ತ ಕುಟುಂಬ ವರ್ಗ
ಪತ್ನಿ : ಶ್ರೀಮತಿ ರತ್ನಮ್ಮ ಮತ್ತು ಮಕ್ಕಳು,
ಸಹೋದರರು, ಸಹೋದರಿಯರು ಮತ್ತು ಬಂಧು-ಮಿತ್ರರು.

# ದೇವರಮನೆಯಿಂದ ಬೆನ್ನಿಗೆ ಚೂರಿ ಹಾಕುವ ಕೆಲಸ



ಕಿಡಿ ಕಾರಿದ ನಗರ ಪಾಲಿಕೆ ಹಿರಿಯ ಸದಸ್ಯ ಎ.ನಾಗರಾಜ್

ದಾವಣಗೆರೆ,ಫೆ.28- ನಗರ ಪಾಲಿಕೆ ಸದಸ್ಯತ್ವಕ್ಕೆ ದೇವರಮನೆ ಶಿವಕುಮಾರ್ ನೀಡಿದ ರಾಜೀನಾಮೆಯಿಂದಾಗಿ ಮಹಾನಗರ ಪಾಲಿಕೆ ಚುಕ್ಕಾಣಿ ಹಿಡಿಯುವಲ್ಲಿ ಕಾಂಗ್ರೆಸ್ ಗೆ 'ಕೈಗೆ ಬಂದ ತುತ್ತು ಬಾಯಿಗೆ ಬರದಂತಾಯಿತು' ಎಂದು ನಗರ ಪಾಲಿಕೆಯ ಹಿರಿಯ ಸದಸ್ಯರೂ ಆಗಿರುವ ಕಾಂಗ್ರೆಸ್ ಮುಖಂಡ ಎ.ನಾಗರಾಜ್ ವ್ಯಾಕುಲತೆ ವ್ಯಕ್ತಪಡಿಸಿದ್ದಾರೆ.

'ಜನತಾವಾಣಿ'ಯೊಂದಿಗೆ ಮಾತನಾಡಿದ ಅವರು, ಈ ಬಾರಿ ನಗರಪಾಲಿಕೆ ಗದ್ದುಗೆ ಹಿಡಿಯಲೇಬೇಕೆಂಬ ಛಲದಿಂದಾಗಿ ಎಲ್ಲಾ ಸಿದ್ಧತೆಗಳನ್ನು ಮಾಡಿಕೊಳ್ಳಲಾಗಿತ್ತು. ಅಧಿಕಾರಕ್ಕೆ ಬಂದೇ ಬರುತ್ತೇವೆ ಎಂಬ ದೃಢ ವಿಶ್ವಾಸವೂ ಇತ್ತು. ಆದರೆ, ಕೊನೆ ಕ್ಷಣದಲ್ಲಿ ದೇವರಮನೆ ಕೈಗೊಂಡ ಏಕಾಏಕಿ ನಿರ್ಧಾರದಿಂದಾಗಿ ಮಾಡಿದ ಎಲ್ಲಾ ಪ್ರಯತ್ನಗಳು ನೀರಿನಲ್ಲಿ ಹುಣಸೇ ಹಣ್ಣು ತೊಳೆದಂತಾಯಿತು ಎಂದು ಅವರು ವಿಷಾದಿಸಿದ್ದಾರೆ.

ನಮ್ಮ ಪಕ್ಷದ ವರಿಷ್ಠರು ದೇವರಮನೆಗೆ ಮೇಯರ್ ಪಟ್ಟ ಕಟ್ಟಬೇಕೆಂದು ತೀರ್ಮಾನಿಸಿದ್ದರು. ವರಿಷ್ಠರ ನಿರ್ಧಾರದಂತೆ ಪಾಲಿಕೆ ಚುಕ್ಕಾಣಿ ಹಿಡಿಯುವ ನಿಟ್ಟಿನಲ್ಲಿ ಪಾಲಿಕೆಯ ಎಲ್ಲಾ ಕಾಂಗ್ರೆಸ್ ಸದಸ್ಯರು ಒಗ್ಗಟ್ಟಿನಿಂದ ಕೆಲಸ ಮಾಡುತ್ತಿದ್ದೆವು. ಈ ಕೆಲಸದಲ್ಲಿ ದೇವರಮನೆ ಕೂಡಾ ಭಾಗಿಯಾಗಿದ್ದರು.

ಆದರೆ, ಮೇಯರ್ ಚುನಾವಣೆಯ ಕ್ಷಣ ಗಣನೆಯಲ್ಲಿ ಎಲ್ಲರೊಂದಿಗಿದ್ದ ಅವರು ಬರುತ್ತೇನೆ ಎಂದಷ್ಟೇ ಹೇಳಿ ಹೋದವರು ನೇರ ಬಿಜೆಪಿ ಕದ ತಟ್ಟಿದ್ದಾರೆ ಎಂದು ನಾಗರಾಜ್ ಅವರು ಹೇಳಿದ್ದಾರೆ.

ಹಿರಿಯ ಶಾಸಕರಾಗಿರುವ ಡಾ. ಶಾಮನೂರು ಶಿವಶಂಕರಪ್ಪ ಅವರು ಮಾಜಿ ಸಚಿವ ಶಾಮನೂರು ಮಲ್ಲಿಕಾರ್ಜುನ್ ಅವರಿಗಿಂತ ಹೆಚ್ಚಾಗಿ ದೇವರಮನೆ ಅವರನ್ನು ನಂಬಿದ್ದರು. ದೇವರಮನೆ ಕೂಡಾ, ಶಂಕ್ರಣ್ಣನವರು ನನ್ನ ಬಗ್ಗೆ ಅಪಾರ ನಂಬಿಕೆ ಇಟ್ಟಿದ್ದಾರೆ. ಹಿಂದೂ ಸಂಘಟನೆಗಳಲ್ಲಿ ನಾನು ಸಕ್ರಿಯನಾಗಿದ್ದರೂ, ನನ್ನನ್ನು ಕರೆದು ಉನ್ನತ ಸ್ಥಾನ - ಮಾನಗಳನ್ನು ನೀಡಿದ್ದಾರೆ. ನನ್ನ ಉಸಿರಿರುವವರೆಗೂ ಈ ಪಕ್ಷವನ್ನು ಮತ್ತು ಶಂಕ್ರಣ್ಣ - ಮಲ್ಲಣ್ಣನವರನ್ನು ಬಿಟ್ಟು ಹೋಗುವುದಿಲ್ಲ ಎಂದು ಆಗಾಗ್ಗೆ ಹೇಳುತ್ತಲೇ ಇದ್ದರು. ಹೀಗಿದ್ದರೂ ಅವರು ಪಕ್ಷ ಬಿಟ್ಟು ಹೋಗಿದ್ದೇಕೆ ?, ಇಲ್ಲಿ ಅಂತಹ ನೋವು ಅವರಿಗೇನಾಗಿತ್ತು ?, ದಿಢೀರ್ ನಿರ್ಧಾರ ಕೈಗೊಳ್ಳುವಂತಹದ್ದೇನಾಗಿತ್ತು ? ಎಂಬುದು ತಮಗೆ ಅರ್ಥವೇ ಆಗುತ್ತಿಲ್ಲ ಎಂದು ನಾಗರಾಜ್ ಹೇಳಿದ್ದಾರೆ.

ಅನಾಯಾಸವಾಗಿ ಕಾಂಗ್ರೆಸ್ ಗೆ ದಕ್ಕುತ್ತಿದ್ದ ಅಧಿಕಾರವನ್ನು ದೇವರಮನೆ ಕಳೆದಿದ್ದಾರೆ. ಅವರ ಏಕಾಏಕಿ ನಿರ್ಧಾರವು, ಯುದ್ಧಕ್ಕೆ ಪಟ್ಟ ಕಟ್ಟಿದಾಗ ಶಸ್ತ್ರ ತ್ಯಾಗ ಮಾಡಿದಂತಾಗಿದೆ. ಒಟ್ಟಿನಲ್ಲಿ ಬೆನ್ನಿಗೆ ಚೂರಿ ಹಾಕುವಂತಹ ಕೆಲಸ ದೇವರಮನೆ ಮಾಡಿದ್ದಾರೆ. ಅವರು ನಂಬಿಕೆಗೆ ಅನರ್ಹ ವ್ಯಕ್ತಿ ಎಂದು ಛೇಡಿಸಿರುವ ನಾಗರಾಜ್, ಇಂತಹವರು ಬಿಜೆಪಿಯಲ್ಲೂ ಸ್ಥಿರವಾಗಿ ಉಳಿಯುವುದಿಲ್ಲ ಎಂಬ ಮಾತನ್ನು ಆ ಪಕ್ಷದ ವರಿಷ್ಠರೊಬ್ಬರು ತಮ್ಮ ಮುಂದೆ ಹೇಳಿದ್ದಾರೆ ಎಂದು ತಿಳಿಸಿದರು.

ತಮಗೆ ಸೈಟು ಇಲ್ಲ ಎಂದು ಸುಳ್ಳು ಹೇಳಿ ದೂಡಾದಿಂದ ಮೂರು ಸೈಟುಗಳನ್ನು ದೇವರಮನೆ ಶಿವಕುಮಾರ್ ಸಹೋದರರು ಪಡೆದಿದ್ದಾರೆ. ಈ ಸೈಟುಗಳನ್ನು ವಾಪಸ್ ಮಾಡದಿದ್ದಲ್ಲಿ ಸೂಕ್ತ ಕ್ರಮ ಕೈಗೊಳ್ಳಬೇಕಾದೀತು ಎಂದು ದೂಡಾ ಅಧ್ಯಕ್ಷ ರಾಜನಹಳ್ಳಿ ಶಿವಕುಮಾರ್ ಈಚೆಗೆ ತಾಕೀತು ಮಾಡಿದ್ದರು. ಬಹುಶಃ ಈ ಸೈಟುಗಳನ್ನು ಉಳಿಸಿಕೊಳ್ಳಲು ದೇವರಮನೆ ಕಾಂಗ್ರೆಸ್ ಬಿಟ್ಟು ಬಿಜೆಪಿಗೆ ಹೋಗಿರಬಬಹುದು ಎಂದು ನಾಗರಾಜ್ ಊಹಿಸಿದ್ದಾರೆ.

# ನೊಳಂಬ ಲಿಂಗಾಯತ ಸಂಘದ ನಿರ್ದೇಶಕರಾಗಿ ಡಾ. ಡಿ.ಬಿ. ಗಂಗಪ್ಪ, ಸಿ.ಬಿ. ಈಶ್ವರಪ್ಪ ಆಯ್ಕೆ



ಮಲೇಬೆನ್ನೂರು, ಫೆ. 28 – ನೊಳಂಬ ಲಿಂಗಾಯತ ಸಂಘದ ಕೇಂದ್ರ ಸಮಿತಿಯ ನಿರ್ದೇಶಕರ ಚುನಾವಣೆಯಲ್ಲಿ ದಾವಣಗೆರೆ ಜಿಲ್ಲೆಯಿಂದ ಹೊನ್ನಾಳಿ ಮಾಜಿ ಶಾಸಕ ಡಾ. ಡಿ.ಬಿ. ಗಂಗಪ್ಪ ಮತ್ತು ನಿವೃತ್ತ ಇಂಜಿನಿಯರ್ ಸಿ.ಬಿ. ಈಶ್ವರಪ್ಪ ಅವರು ಆಯ್ಕೆಯಾಗಿದ್ದಾರೆ.

ದಾವಣಗೆರೆ ಜಿಲ್ಲೆಯಿಂದ ಆಯ್ಕೆಯಾಗ ಬೇಕಿದ್ದ 2 ನಿರ್ದೇಶಕರ ಸ್ಥಾನಗಳಿಗೆ ಭಾನುವಾರ ದಾವಣಗೆರೆ ನಗರದ ಎಸ್.ಎಸ್.'ಬಿ' ಬ್ಲಾಕ್‌ನಲ್ಲಿರುವ ಲಿಟಲ್ ಚಾಂಪ್ಸ್ ಗುರು ಕುಲಂ ಶಾಲೆಯಲ್ಲಿ ಚುನಾವಣೆ ನಡೆಯಿತು. 2 ಸ್ಥಾನಗಳಿಗೆ ಸ್ಪರ್ಧಿಸಿದ್ದ ಡಾ. ಡಿ.ಬಿ. ಗಂಗಪ್ಪ 338 ಮತ್ತು ಸಿ.ಬಿ. ಈಶ್ವರಪ್ಪ 241 ಮತಗಳನ್ನು ಪಡೆದು ಆಯ್ಕೆಯಾದರೆ, ಪುನರಾಯ್ಕೆ ಬಯಸಿ ಸ್ಪರ್ಧಿಸಿದ್ದ ಹೊನ್ನಾಳಿ ತಾಲ್ಲೂಕಿನ ಮಾದೇನಹಳ್ಳಿಯ ರುದ್ರೇಗೌಡ 195 ಮತ್ತು ಹರಿಹರ ತಾಲ್ಲೂಕಿನ ಜಿ.ಬೇವಿನಹಳ್ಳಿಯ ಬಿ.ಕೆ. ಮಹೇಶ್ವರಪ್ಪ ಅವರು 144 ಮತಗಳನ್ನು ಪಡೆದು ಪರಾಭವಗೊಂಡರು.

ಕೇಂದ್ರ ಸಮಿತಿಗೆ ಕಳೆದ 3 ವರ್ಷಗಳಿಂದ ನಾಮ ನಿರ್ದೇಶಿತ ನಿರ್ದೇಶಕರಾಗಿ ಕಾರ್ಯನಿರ್ವಹಿಸಿದ್ದ ಜಿಗಳಿಯ ಎನ್.ಆರ್. ಇಂದೂಧರ್ ಅವರು ಇದೇ ಮೊದಲ ಬಾರಿಗೆ ಆಯ್ಕೆ ಬಯಸಿ ಸ್ಪರ್ಧಿಸಿ, 186 ಮತಗಳನ್ನು ಪಡೆದು ವಿಫಲರಾದರು. ಬೆಂಗಳೂರಿನ ಬಸವೇಶ್ವರ ನಗರದಲ್ಲಿರುವ ನೊಳಂಬ ಲಿಂಗಾಯತ ಸಂಘ ಸ್ಥಾಪನೆಯಾಗಿ ಸುಮಾರು 40 ವರ್ಷಗಳನ್ನು ಪೂರೈಸಿದ್ದು, ಇದೇ ಮೊದಲ ಬಾರಿಗೆ ಚುನಾವಣೆ ನಡೆದಿದೆ ಎನ್ನಲಾಗಿದೆ.

ಕೇಂದ್ರ ಸಮಿತಿ ಒಟ್ಟು 15 ನಿರ್ದೇಶಕರನ್ನು ಹೊಂದಿದೆ, ತರೀಕೆರೆ ಮಾಜಿ ಶಾಸಕ ಎಸ್.ಎಂ.ನಾಗರಾಜ್ ಅವರು ಈಗಾಗಲೇ ಅವಿರೋಧವಾಗಿ ಆಯ್ಕೆಯಾಗಿದ್ದು, ದಾವಣಗೆರೆ ಜಿಲ್ಲೆಯಿಂದ ಮಾಜಿ ಶಾಸಕ ಡಾ. ಡಿ.ಬಿ ಗಂಗಪ್ಪ ಮತ್ತು ನಿವೃತ್ತ ಇಂಜಿನಿಯರ್ ಸಿ.ಬಿ. ಈಶ್ವರಪ್ಪ ಇದೇ ಮೊದಲ ಬಾರಿಗೆ ಸಂಘದ ಕೇಂದ್ರಸಮಿತಿ ಪ್ರವೇಶಿಸಿದ್ದಾರೆ.

ದಾವಣಗೆರೆ ಜಿಲ್ಲೆಯಲ್ಲಿ ಒಟ್ಟು 825 ಮತದಾರರಿದ್ದು ಅದರಲ್ಲಿ 601 ಮತದಾರರು ತಮ್ಮ ಹಕ್ಕು ಚಲಾಯಿಸಿದರು. ಒಂದು ಮತ ತಿರಸ್ಕೃತಗೊಂಡಿತು. ಒಬ್ಬ ಮತದಾರ ಇಬ್ಬರಿಗೆ ಮತ ಹಾಕುವ ಅವಕಾಶ ಇತ್ತು. ಉಪನ್ಯಾಸಕ ಸಿದ್ದಯ್ಯ ಚುನಾವಣಾಧಿಕಾರಿಯಾಗಿದ್ದರು. ಇದೇ ಮೊದಲ ಬಾರಿಗೆ ಚುನಾವಣೆ ನಡೆದಿದ್ದರಿಂದ ಬಹಳ ಮಹತ್ವ ಪಡೆದುಕೊಂಡಿತ್ತು, ಕಳೆದ ಒಂದು ವಾರದಿಂದ ಅಭ್ಯರ್ಥಿಗಳು ಗೆಲುವಿಗಾಗಿ ತೀವ್ರ ಪ್ರಚಾರ ನಡೆಸಿದ್ದರು.

**ವಿಜಯೋತ್ಸವ:** ಚುನಾವಣಾ ಫಲಿತಾಂಶ ಪ್ರಕಟಗೊಂಡ ನಂತರ ಡಾ. ಗಂಗಪ್ಪ ಮತ್ತು ಈಶ್ವರಪ್ಪ ಬೆಂಬಲಿಗರು ಪಟಾಕಿ ಸಿಡಿಸಿ, ಸಿಹಿ ಹಂಚಿ ವಿಜಯೋತ್ಸವ ಆಚರಿಸಿದರು. ಡಾ. ಟಿ. ಬಸವರಾಜ್, ಹಿಂಡಸಘಟ್ಟೆ ಮುರುಗೇಶ್, ಹಳ್ಳಿಹಾಳ್ ಪರಮೇಶ್ವರಪ್ಪ, ವಾಸನ ಬಸವರಾಜಪ್ಪ, ಜಿಗಳಿಯ ಗೌಡ್ರು ಬಸವರಾಜಪ್ಪ, ಕೊಕ್ಕನೂರು ಆಂಜನೇಯ ಪಾಟೀಲ್ ಹಾಗೂ ಮಾದೇನಹಳ್ಳಿ ಲೋಹಿತ್ ಮತ್ತಿತರರು ವಿಜಯೋತ್ಸವದಲ್ಲಿ ಭಾಗಿಯಾಗಿದ್ದರು.

# 'ವಿದ್ಯಾರ್ಥಿ ದೇವೋಭವ' ಎಂದ ಲಿಂ. ಜಯದೇವ ಶ್ರೀ

> ಜಗದ್ಗುರು ಎಂದ ಮೇಲೆ ಎಲ್ಲಾ ಜಾತಿಗಳಿಗೆ ಗುರುವಾಗಿರಬೇಕು. ಆದರೆ ಇತ್ತೀಚಿನ ದಿನಗಳಲ್ಲಿ ಕೆಲ ಮಠಾಧೀಶರು ಜಗದ್ಗುರುಗಳು ಎಂದು ಕರೆಯಿಸಿಕೊಂಡು ಕೇವಲ ಒಂದು ಜಾತಿ-ಉಪಜಾತಿಗಾಗಿ ಹೋರಾಟ ನಡೆಸುತ್ತಿದ್ದಾರೆ. ಅವರು ಜಗದ್ಗುರು ಎಂದು ಕರೆಯಿಸಿಕೊಳ್ಳುವುದನ್ನು ಕೈ ಬಿಡಬೇಕು ಎಂದು 'ಜಯದೇವ ಶ್ರೀ' ಪ್ರಶಸ್ತಿ ಸ್ವೀಕರಿಸಿದ ಸಾಹಿತಿ ಡಾ.ಕೆ. ಮರುಳಸಿದ್ದಪ್ಪ ಹೇಳಿದರು.

**(1ನೇ ಪುಟದಿಂದ)** ಮಠಕ್ಕೆ ಬರುತ್ತಿದ್ದರು. ಶ್ರೀಗಳ ಸುತ್ತಾಟದಲ್ಲಿ ಭಕ್ತರ ಹಾಗೂ ಸಮಾಜದ ಒಡನಾಟವಾಗುತ್ತಿತ್ತು. ಒಳ ನೋಟವಿರುತ್ತಿತ್ತು ಎಂದರು.

ಶರಣ ಸಂಸ್ಕೃತಿ ಆಚರಣೆ ಹಾಗೂ ಜಯದೇವ ಶ್ರೀಗಳ ಸ್ಮರಣೆ ಮಾಡುವುದು ಬಸವಣ್ಣನವರು ಹಾಗೂ ಜಯದೇವ ಶ್ರೀಗಳಿಗೆ ಸಲ್ಲಿಸುವ ದೊಡ್ಡ ಗೌರವ ಎಂದು ನುಡಿದರು.

'ಜಯದೇವ ಶ್ರೀ' ಪ್ರಶಸ್ತಿ ಸ್ವೀಕರಿಸಿ ಮಾತನಾಡಿದ ಸಾಹಿತಿ ಡಾ.ಕೆ. ಮರುಳಸಿದ್ದಪ್ಪ, ಸಾಮಾಜಿಕ ಕ್ಷೇತ್ರಕ್ಕೆ ಬಹುದೊಡ್ಡ ಕೊಡುಗೆ ನೀಡಿದ ಸಂತ ಲಿಂ.ಜಯದೇವ ಶ್ರೀಗಳು ಎಂದು ಬಣ್ಣಿಸಿದರು.

100 ವರ್ಷಗಳ ಹಿಂದೆ ಲಿಂಗಾಯತ ಸಮಾಜ ಸಂಪೂರ್ಣ ಅನಕ್ಷರಸ್ಥವಾಗಿತ್ತು. ಸಮಾಜಕ್ಕೆ ಬೆಳಕು ಸಿಗಬೇಕಾದರೆ ಶಿಕ್ಷಣ ಮುಖ್ಯ ಎಂದು ಭಾವಿಸಿದ ಶ್ರೀಗಳು ಅಕ್ಷರ ದಾಸೋಹಕ್ಕೆ ಮುಂದಾದರು. ಶಿಕ್ಷಣದ ಮೂಲಕ ಸಮಾಜವನ್ನು ಪ್ರಗತಿ ಪಥದತ್ತ ಕೊಂಡೊಯ್ದರು. ಅಂದು ಆರಂಭಿಸಿದ ಮಹಾ ಕಾರ್ಯವನ್ನು ಉಳಿದ ಮಠಗಳು, ಸಂಘ-ಸಂಸ್ಥೆಗಳು ಅನುಸರಿಸಲು ಮುಂದಾದವು ಎಂದರು.

ಜಾತಿಗೊಂದು ಮಠ ಸ್ಥಾಪನೆ ಜಾತೀಯತೆಗೆ ಕಾರಣ ಎಂದು ಹಲವರ ಭಾವನೆಯಾಗಿದೆ. ಆದರೆ ಆ ಸಮಾಜ ಅನಾಥ ಪ್ರಜ್ಞೆಯಿಂದ ಬಳಲದೆ, ಸಮಾಜದಲ್ಲಿ ಗುರುತಿಸಿಕೊಳ್ಳಬೇಕೆಂಬ ಉದ್ದೇಶದಿಂದ ಮಠಗಳ ಸ್ಥಾಪನೆಗೆ ಮುರುಘಾ ಶರಣರು ಪ್ರೋತ್ಸಾಹಿಸುತ್ತಿರುವುದು ಉತ್ತಮ ಕಾರ್ಯ ಎಂದರು.

ಜಾತಿ ರಹಿತ ಸಮಾಜ ನಮ್ಮೆಲ್ಲರ ಗುರಿಯಾಗಿದೆ. ಆದರೆ ಅದಕ್ಕೆ ಪೂರ್ವಭಾವಿಯಾಗಿ ಜಾತಿ ಸಮಾನತೆ ಅಗತ್ಯವಿದೆ. ಅದಿಲ್ಲದಿದ್ದರೆ ಜಾತಿ ರಹಿತ ಸಮಾಜ ನಿರ್ಮಾಣ ಸಾಧ್ಯವಿಲ್ಲ ಎಂದು ಹೇಳಿದರು.

ಕೆಲ ಪಟ್ಟಭದ್ರ ಹಿತಾಸಕ್ತಿಗಳು ಜನರಲ್ಲಿ ಮೌಢ್ಯವನ್ನು ಬಿತ್ತುತ್ತಿವೆ. ದೇವರ ವಿಚಾರದಲ್ಲಿ ಭಕ್ತಿಗಿಂತ ಭಯ ಹೆಚ್ಚಾಗಿದೆ. ದೇವರೆಂದರೆ ಲಂಚಕೋರ ಅಧಿಕಾರಿ ಎಂದು ಭಾವಿಸುವಷ್ಟರ ಮಟ್ಟಿಗೆ ಪ್ರಚಾರ ಮಾಡಲಾಗುತ್ತಿದೆ. ಹೆಚ್ಚು ದಕ್ಷಿಣೆ ನೀಡಿದರೆ ದೇವರ ಅನುಗ್ರಹ. ಇಲ್ಲವಾದರೆ ಶಿಕ್ಷೆ ಎಂಬಂತೆ ಸೃಷ್ಟಿಸಿ ಜನರ ದಾರಿ ತಪ್ಪಿಸಲಾಗುತ್ತಿದೆ ಎಂದರು.

'ಶೂನ್ಯಪೀಠ ಅಕ್ಕನಾಗಮ್ಮ' ಪ್ರಶಸ್ತಿ ಸ್ವೀಕರಿಸಿ ಮಾತನಾಡಿದ ಕರ್ನಾಟಕ ರಾಜ್ಯ ಕರಕುಶಲ ನಿಗಮದ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀಮತಿ ರೂಪಾ ಡಿ.ಮೌದ್ಗಿಲ್, ಪಠ್ಯದಲ್ಲಿ ವಚನಗಳಿಗೆ ಹೆಚ್ಚಿನ ಆದ್ಯತೆ ನೀಡಬೇಕು ಎಂದು ಪ್ರತಿಪಾದಿಸಿದರು.

ಚಿಕ್ಕವರಿದ್ದಾಗಲೇ ಮಕ್ಕಳಿಗೆ ವಚನಗಳನ್ನು ಹೇಳಿಕೊಟ್ಟರೆ ಮುಂದೆ ಅವರು ಉತ್ತಮ ಜೀವನ ರೂಪಿಸಿಕೊಳ್ಳಲು ಸಾಧ್ಯವಿದೆ. ಆದರೆ ಪಠ್ಯದಲ್ಲಿ ಪ್ರಸ್ತುತ ಅಲ್ಲೊಂದು ಇಲ್ಲೊಂದು ವಚನಗಳಿವೆ. ಮತ್ತಷ್ಟು ವಚನಗಳನ್ನು ಪಠ್ಯದಲ್ಲಿ ಸೇರಿಸಬೇಕಿದೆ ಎಂದು ಹೇಳಿದರು.

'ಶೂನ್ಯ ಪೀಠ ಅಲ್ಲಮ' ಪ್ರಶಸ್ತಿ ಸ್ವೀಕರಿಸಿದ ಸುದ್ದಿಮೂಲ ಪತ್ರಿಕೆ ಸಂಪಾದಕ ಬಸವರಾಜಸ್ವಾಮಿ ಮಾತನಾಡುತ್ತಾ, ನಾಡಿನ ಮಠಗಳು, ಗುರುಗಳು ಶರಣರ ವಚನಗಳ ಬಗ್ಗೆ ಸಂಶೋಧನೆ ಮಾಡಬೇಕು. ಶರಣ ಸೂತ್ರ ತಿಳಿಯಲು ಪ್ರಯತ್ನಿಸಬೇಕು ಎಂದರು.

'ಶೂನ್ಯಪೀಠ ಚನ್ನಬಸವ' ಪ್ರಶಸ್ತಿ ಸ್ವೀಕರಿಸಿದ ಸಾಹಿತಿ ಪ್ರೊ.ಹೆಚ್.ಲಿಂಗಪ್ಪ ಮಾತನಾಡುತ್ತಾ, ಶರಣರ ವಚನಗಳಂತೆ ಎಲ್ಲರೂ ಬದುಕಿದರೆ ಬಸವಣ್ಣನವರ ಚಿಂತನೆಗಳಿಗೆ ನಿಜವಾದ ನ್ಯಾಯ ಕೊಡಲು ಸಾಧ್ಯ ಎಂದರು.

ಕರ್ನಾಟಕ ಜಾನಪದ ಅಕಾಡೆಮಿ ಸದಸ್ಯೆ ರುದ್ರಾಕ್ಷಿಬಾಯಿ ಹಾಗೂ ಕಲಾವಿದ ಬಸವ ಪ್ರಸಾದ ಮತ್ತು ಚಿತ್ರದುರ್ಗದ ಜಮುರಾ ಕಲಾವಿದರು ಹಾಗೂ ವಿರಕ್ತಮಠದ ಬಸವ ಕಲಾ ಲೋಕದವರು ವಚನ ಸಂಗೀತ ಕಾರ್ಯಕ್ರಮ ನಡೆಸಿಕೊಟ್ಟರು.

ಅಂದನೂರು ಮುಪ್ಪಣ್ಣ, ಡಾ.ಸಿ.ಆರ್. ನಸೀರ್ ಅಹಮದ್, ವಿಜಯಣ್ಣ, ರಘುಬಾಯಿ ಪಟೇಲ್, ಡಿ.ಬಸವರಾಜ್ ಇತರರು ಉಪಸ್ಥಿತರಿದ್ದರು. ಎಂ.ಜಯಕುಮಾರ್ ಸ್ವಾಗತಿಸಿದರು. ಎಂ.ಕೆ. ಬಕ್ಕಪ್ಪ ನಿರೂಪಿಸಿದರು.

# ಬಡವರಾಗಿದ್ದರೂ ಸ್ವಾಭಿಮಾನದಲ್ಲಿ ಶ್ರೀಮಂತರು



**(1ನೇ ಪುಟದಿಂದ)** ಶಿಕ್ಷಣವೊಂದೇ ಮಾರ್ಗ. ಕುಂಬಾರ ಸಮುದಾಯದವರು ತಮ್ಮ ಮಕ್ಕಳಿಗೆ ಉತ್ತಮ ಶಿಕ್ಷಣ ಕೊಡಿಸಬೇಕು. ಕುಟುಂಬದ ಒಬ್ಬರಿಗೆ ನೌಕರಿ ಸಿಕ್ಕರೂ ಇಡೀ ಕುಟುಂಬ ಉದ್ಧಾರವಾಗುತ್ತದೆ ಎಂದವರು ತಿಳಿಸಿದರು.

ಸರ್ವಜ್ಞ ಕುಂಬಾರ ಸಮುದಾಯದವರು ಎಂಬುದು ಸಮುದಾಯಕ್ಕೆ ಹೆಮ್ಮೆ. ಸರ್ವಜ್ಞನ ಹೆಸರನ್ನು ನಗರದ ಪ್ರಮುಖ ವೃತ್ತಕ್ಕೆ ಇಡಲು ಹೋರಾಟ ನಡೆಸಬೇಕಿದೆ ಎಂದೂ ಅವರು ಹೇಳಿದರು.

ಪ್ರಾಸ್ತಾವಿಕವಾಗಿ ಮಾತನಾಡಿದ ಕುಂಬಾರ ಸಂಘದ ಮಾಜಿ ಪ್ರಧಾನ ಕಾರ್ಯದರ್ಶಿ ಎಂ. ಕುಬೇರಪ್ಪ, ಸರ್ವಜ್ಞ ಕುಂಬಾರ ಸಮುದಾಯಕ್ಕೆ ಸೇರಿದವರಲ್ಲ ಎಂದು ಕೆಲವರು ವಾದಿಸುತ್ತಿದ್ದಾರೆ. ಇತಿಹಾಸದಲ್ಲಿ ಯಾರೇ ಬುದ್ಧಿವಂತರಿದ್ದರೆ ಅದು ಉನ್ನತ ಜಾತಿಗೆ ಸೇರಿದವರು ಎಂಬ ಭಾವನೆ ಸರಿಯಲ್ಲ. ಸರ್ವಜ್ಞನ ಹಲವಾರು ತ್ರಿಪದಿಗಳಲ್ಲಿ ಕುಂಬಾರ ಎಂಬ ಸೂಚನೆ ಸಿಗುತ್ತದೆ ಎಂದರು. ಕಾರ್ಯಕ್ರಮಕ್ಕೆ ತಡವಾಗಿ ಸಂಘದ ಕೋಶಾಧ್ಯಕ್ಷ ಕೆ.ಸಿ.ಲೋಕೇಶ್ ಹಣಕಾಸು ವರದಿ ಮಂಡಿಸಿದರು. ಪ್ರಧಾನ ಕಾರ್ಯದರ್ಶಿ ಕೆ.ಬಿ. ಚಂದ್ರಶೇಖರ್ ಸಂಘದ ವರದಿ ವಾಚಿಸಿದರು.

ವೇದಿಕೆಯ ಮೇಲೆ ಸಿದ್ದಗಂಗಾ ಶಿಕ್ಷಣ ಸಂಸ್ಥೆಯ ಮುಖ್ಯಸ್ಥೆ ಡಾ. ಜಸ್ಟಿನ್ ಡಿಸೋಜ, ಸಾಹಿತಿ - ಸಂಶೋಧಕ ಡಾ. ಮಂಜಪ್ಪ ಬುರುಡೆಕಟ್ಟೆ ಮತ್ತಿತರರು ಉಪಸ್ಥಿತರಿದ್ದರು.

ಸಂಘದ ಅಧ್ಯಕ್ಷ ಬಸವರಾಜ ಕುಂಚೂರು ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ಸಹ ಕಾರ್ಯದರ್ಶಿ ಕೆ.ಹೆಚ್. ಸದಾಶಿವಪ್ಪ ಸ್ವಾಗತಿಸಿದರು.

**ಖಾಲಿ ಸಿ.ಎ. ನಿವೇಶನಗಳು ವಾಪಸ್ :** ಕೆಲ ಬಲಿಷ್ಠ ಸಮುದಾಯದವರು ಅಗತ್ಯ ಇಲ್ಲದೇ ಇದ್ದರೂ ಸಿ.ಎ. ನಿವೇಶನಗಳನ್ನು ಪಡೆದುಕೊಂಡು ಖಾಲಿ ಬಿಟ್ಟಿದ್ದಾರೆ. ಇಂತಹ ಖಾಲಿ ಬಿಟ್ಟ ನಿವೇಶನಗಳನ್ನು ಗುರುತಿಸಿ ನಗರಾಭಿವೃದ್ಧಿ ಪ್ರಾಧಿಕಾರಕ್ಕೆ ವಾಪಸ್ ಪಡೆಯಲಾಗುತ್ತಿದೆ ಎಂದು ದೂಡಾ ಅಧ್ಯಕ್ಷ ರಾಜನಹಳ್ಳಿ ಶಿವಕುಮಾರ್ ತಿಳಿಸಿದ್ದಾರೆ.

ಸಿ.ಎ. ನಿವೇಶನಗಳನ್ನು ಪಡೆದರೂ ನಿಗದಿತ ಸಮಯದಲ್ಲಿ ನಿರ್ಮಾಣ ಕೈಗೊಳ್ಳಬೇಕೆಂಬ ನಿಯಮವಿದೆ. ಈ ನಿಯಮ ಮೀರಿ ನಿವೇಶನ ಖಾಲಿ ಉಳಿಸಿಕೊಂಡವರಿಂದ ವಾಪಸ್ ಪಡೆಯಲಾಗುವುದು ಎಂದವರು ಹೇಳಿದ್ದಾರೆ.



## ಸರ್ವಜ್ಞ ಸಮುದಾಯ ಭವನ ಉದ್ಘಾಟಿಸಿದ ಎಸ್ಸೆಸ್

ದಾವಣಗೆರೆ : ಶಾಸಕ ಶಾಮನೂರು ಶಿವಶಂಕರಪ್ಪ ಅವರು ಕುಂಬಾರರ ಸಂಘದಿಂದ ನಿರ್ಮಿಸಿರುವ ಸರ್ವಜ್ಞ ಭವನ/ವಿದ್ಯಾರ್ಥಿ ನಿಲಯದ ಉದ್ಘಾಟನೆಯನ್ನು ನೆರವೇರಿಸಿದರು. ನಗರದ ಎಸ್.ಎಸ್. ಬಡಾವಣೆಯಲ್ಲಿ ಜಿಲ್ಲಾ ಕುಂಬಾರ ಸಂಘದಿಂದ ಭವನವನ್ನು ನಿರ್ಮಿಸಲಾಗಿದೆ. ಈ ಸಂದರ್ಭದಲ್ಲಿ ಸಂಘದ ಪದಾಧಿಕಾರಿಗಳು ಹಾಗೂ ಸಮಾಜದ ಮುಖಂಡರು ಉಪಸ್ಥಿತರಿದ್ದರು.

## ಜಿ.ಎಂ.ಸಿದ್ದೇಶ್ವರರ ಇಂದಿನ ಕಾರ್ಯಕ್ರಮ

ಚನ್ನಗಿರಿ ತಾಲ್ಲೂಕಿನ ತಣಿಗೆರೆ ಗ್ರಾಮದಲ್ಲಿ ಇಂದು ಮಧ್ಯಾಹ್ನ 12ಕ್ಕೆ ಜನಸ್ಪಂದನ ಹಾಗೂ ವಿವಿಧ ಕಾಮಗಾರಿಗಳ ಉದ್ಘಾಟನೆ ಮತ್ತು ಶಂಕುಸ್ಥಾಪನೆ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲಿದ್ದಾರೆ. ನಂತರ ಮಧ್ಯಾಹ್ನ 3ಕ್ಕೆ ಹೊನ್ನಾಳಿ ಪಟ್ಟಣದಲ್ಲಿ ಸಿ.ಎಂ.ರಾಜಕೀಯ ಕಾರ್ಯದರ್ಶಿ, ಶಾಸಕ ಎಂ.ಪಿ. ರೇಣುಕಾಚಾರ್ಯ ಹುಟ್ಟುಹಬ್ಬದ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲಿದ್ದಾರೆ.

## ನಗರದಲ್ಲಿ ಇಂದು - ನಾಳೆ ವಿಶೇಷ ಪೂಜೆ

ಶ್ರೀ ಶಂಕರ ಸೇವಾ ಸಂಘದಿಂದ ನಿಜಲಿಂಗಪ್ಪ ಬಡಾವಣೆಯಲ್ಲಿರುವ ಶ್ರೀ ಗಣಪತಿ, ಶ್ರೀ ಶಾರದಾಂಬ, ಶ್ರೀ ಚಂದ್ರಮೌಳೇಶ್ವರ ಮತ್ತು ಶ್ರೀ ಶಂಕರಾಚಾರ್ಯ ದೇವಸ್ಥಾನಗಳ 12 ನೇ ವಾರ್ಷಿಕೋತ್ಸವದ ಅಂಗವಾಗಿ ಇಂದು ಮತ್ತು ನಾಳೆ ದಿನಾಂಕ 2ರ ಮಂಗಳವಾರದಂದು ವಿಶೇಷ ಪೂಜಾ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಇಂದು ಬೆಳಿಗ್ಗೆ 7 ರಿಂದ ಮಂಗಳವಾದ್ಯ, ಗಂಗಾಪೂಜೆ, ಪ್ರಾರ್ಥನೆ, ಪುಣ್ಯಾಹ ವಾಚನ, ದೇವನಾಂದಿ, ಕಲಶ ಸ್ಥಾಪನೆ, ಅಭಿಷೇಕ, ಮೃತ್ಯುಂಜಯ ಹೋಮ, ದುರ್ಗಾ ಹೋಮ. ಮಧ್ಯಾಹ್ನ 12 ಕ್ಕೆ ಪೂರ್ಣಾಹುತಿ, ಮಂಗಳಾರತಿ ಪೂಜಾ ಕಾರ್ಯಗಳು ಜರುಗಲಿವೆ.

## ಹಿರಿಯ ನಾಗರಿಕರಿಗೆ ಲಸಿಕೆ

**(1ನೇ ಪುಟದಿಂದ)** ನೀಡಲಾಗುವುದು. ಆದರೆ, ಆನ್‌ಲೈನ್ ಮೂಲಕ ನೋಂದಾಯಿಸಿಕೊಂಡವರಿಗೆ ನಿರ್ದಿಷ್ಟ ದಿನಾಂಕ ಹಾಗೂ ಸಮಯ ನೀಡಲಾಗುವುದು. ಸರ್ಕಾರಿ ಆಸ್ಪತ್ರೆಗಳಲ್ಲಿ ಲಸಿಕೆ ಉಚಿತವಾಗಿದೆ. ಆದರೆ, ಖಾಸಗಿ ಆಸ್ಪತ್ರೆಗಳಲ್ಲಿ ಪ್ರತಿ ಲಸಿಕೆಗೆ 250ರೂ. ನಿಗದಿ ಪಡಿಸಲಾಗಿದೆ. ಇದರಲ್ಲಿ 100 ರೂ. ಸೇವಾ ಶುಲ್ಕ ಹಾಗೂ 150 ರೂಗಳನ್ನು ಸರ್ಕಾರದ ನಿಗದಿತ ಖಾತೆಗೆ ಜಮಾ ಮಾಡಲಾಗುವುದು.

## ಲಸಿಕೆ ದರ ಕಡಿಮೆಗೆ ಆಕ್ಷೇಪ

**(1ನೇ ಪುಟದಿಂದ)** ಪಡಿಸಿದೆ. ಆದರೆ, 100 ರೂ.ಗಳು ಆಸ್ಪತ್ರೆಗೆ ಹೋಗಲಿದೆ. ಇದರಿಂದಾಗಿ ಲಸಿಕಾ ಕಂಪನಿಗೆ ಕೇವಲ 150 ರೂ. ಮಾತ್ರ ಸಿಗುತ್ತದೆ. ಇದು ಕೇವಲ ಎರಡು ಡಾಲರ್‌ಗಳು ಎಂದವರು ತಿಳಿಸಿದ್ದಾರೆ.

ಇಷ್ಟು ಕಡಿಮೆ ದರ ನಿಗದಿ ಪಡಿಸಿದರೆ, ಲಸಿಕೆ ಅಭಿವೃದ್ಧಿ ಹಾಗೂ ಉತ್ಪಾದನೆ ದೇಶ ಬಿಟ್ಟು ಹೊರ ಹೋಗಲಿದೆ. ಇಷ್ಟು ಕಡಿಮೆ ದರಕ್ಕೆ ಲಸಿಕೆ ಉತ್ಪಾದಿಸಲು ಯಾವ ಕಂಪನಿಯೂ ಭಾರತಕ್ಕೆ ಅನುಮತಿ ಕೊಡುವುದಿಲ್ಲ ಎಂದವರು ಎಚ್ಚರಿಸಿದ್ದಾರೆ.

## ವಿವಿಧೆಡೆ ಇಂದು ವಿದ್ಯುತ್ ವ್ಯತ್ಯಯ

220 ಕೆ.ವಿ. ಎಸ್.ಆರ್.ಎಸ್ ದಾವಣಗೆರೆ ವಿದ್ಯುತ್ ಸ್ವೀಕರಣಾ ಕೇಂದ್ರದಿಂದ ಹೊರಡುವ ರಂಗನಾಥ ಫೀಡರ್‌ನಲ್ಲಿ ಕೆ.ಯು.ಐ.ಡಿ.ಎಫ್.ಸಿ ವತಿಯಿಂದ ತುರ್ತು ಕಾಮಗಾರಿ ಹಮ್ಮಿಕೊಂಡಿರುವುದರಿಂದ ನಗರದ ಯುಬಿಡಿಟಿ ಲೇಡಿಸ್ ಹಾಸ್ಟೆಲ್, ಜಮುನಾ ವಾಣಿಜ್ಯ ಮಳಿಗೆ, ಸವಿತಾ ಹೋಟೆಲ್, ವಿದ್ಯಾನಗರ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವುಂಟಾಗಲಿದೆ.

Form-IV

**STATEMENT OF OWNERSHIP**

Other Particulars about Newspaper

**JANATHAVANI**

| | | |
|---|---|---|
| 1. | Place of Publication | : Davanagere. |
| 2. | Periodicity of Publication | : Daily |
| 3. | Printers Name<br>Nationality<br>Address | : Jayadhara Offset Printers<br>: Indian<br>: 605, 'Jayadhara'<br>Hadadi Road<br>Davanagere-577005.<br>Karnataka |
| 4. | Publishers Name<br>Nationality<br>Address | : Vikas Shadaksharappa Mellekatte<br>: Indian<br>: 605, 'Jayadhara',<br>Hadadi Road,<br>Davanagere-577005.<br>Karnataka |
| 5. | Editors Name<br>Nationality<br>Address | : Vikas Shadaksharappa Mellekatte<br>: Indian<br>: No. 967, Jayadhara<br>Taralabalu Extension,<br>Davanagere-577005. |
| 6. | Name and address of individuals who own the newspaper or partners of shareholders holding more than one percent of the total capital. | : Vikas Shadaksharappa Mellekatte<br>No. 967, Jayadhara<br>Taralabalu Extension<br>Davanagere-577005. |

I, Vikas Shadaksharappa Mellekatte hereby declare that the Particulars given above are true to the best of our knowledge and belief.

Sd/-

Davanagere.
Date : 01.03.2021

Vikas Shadaksharappa Mellekatte
Publisher.


**ಕೈಲಾಸ ಶಿವಗಣಾರಾಧನೆ ಆಹ್ವಾನ ಪತ್ರಿಕೆ**




ದಾವಣಗೆರೆ ತಾಲ್ಲೂಕಿನ ಹೊಸ ಕುಂದುವಾಡ ವಾಸಿ
ಅಗಸನಕಟ್ಟೆ ಶ್ರೀಮತಿ ಗಿರಿಜಮ್ಮ ಮತ್ತು ಮಕ್ಕಳು ಮಾಡುವ ವಿಜ್ಞಾಪನೆಗಳು.
ದಿನಾಂಕ 21.02.2021 ನೇ ಭಾನುವಾರ ರಾತ್ರಿ 10.15ಕ್ಕೆ ನಮ್ಮ ಪೂಜ್ಯ ಪತಿ
**ಅಗಸನಕಟ್ಟೆ ಶ್ರೀ ಷಣ್ಮುಖಪ್ಪನವರು**
ದೈವಾಧೀನರಾದ ಪ್ರಯುಕ್ತ ಮೃತರ ಆತ್ಮ ಶಾಂತಿಗಾಗಿ
**ಕೈಲಾಸ ಶಿವಗಣಾರಾಧನೆಯನ್ನು**
ದಿನಾಂಕ 01.3.2021 ರ ಸೋಮವಾರ ಬೆಳಿಗ್ಗೆ 10.30ಕ್ಕೆ ದಾವಣಗೆರೆ ತಾಲ್ಲೂಕಿನ ಹೊಸ ಕುಂದುವಾಡ ಗ್ರಾಮದಲ್ಲಿರುವ ಮೃತರ ಸ್ವಗೃಹದಲ್ಲಿ ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿ ಕೋರಬೇಕಾಗಿ ವಿನಂತಿ.

ಇಂತಿ ದುಃಖತಪ್ತರು: ಅಗಸನಕಟ್ಟೆ ಶ್ರೀಮತಿ ಗಿರಿಜಮ್ಮ ಮತ್ತು ಮಕ್ಕಳು, ಸೊಸೆಯಂದಿರು, ಅಳಿಯಂದಿರು, ಮೊಮ್ಮಕ್ಕಳು, ಅಗಸನಕಟ್ಟೆ ವಂಶಸ್ಥರು ಹಾಗೂ ಬಂಧು-ಮಿತ್ರರು. ಮೊ : 99800 39925



॥ ಶ್ರೀ ಶಿವಾರಾಧನಾ ಪ್ರಸನ್ನ ॥

**ಕೈಲಾಸ ಶಿವಗಣಾರಾಧನೆ ಆಹ್ವಾನ ಪತ್ರಿಕೆ**



ದಾವಣಗೆರೆ ತಾ॥ ಶಿರಮಗೊಂಡನಹಳ್ಳಿ ವಾಸಿ
ದಿ॥ ಕಂಚುಗಾರನಹಳ್ಳಿ ಚನ್ನಬಸಪ್ಪನವರ
ಮಗ ಕೆ.ಸಿ. ಗಂಗಾಧರ
ಇವರು ಮಾಡುವ ವಿಜ್ಞಾಪನೆಗಳು.
ದಿನಾಂಕ 21.02.2021ರ ಭಾನುವಾರ
ಬೆಳಿಗ್ಗೆ 3 ಗಂಟೆಗೆ ನನ್ನ ತಾಯಿಯವರಾದ
**ಶ್ರೀಮತಿ ಜಯ್ಯಮ್ಮ**
ಇವರು ಲಿಂಗೈಕ್ಯರಾದ ಪ್ರಯುಕ್ತ, ಆತ್ಮಶಾಂತಿಗಾಗಿ
**ಕೈಲಾಸ ಶಿವಗಣಾರಾಧನೆಯನ್ನು**
**ದಿನಾಂಕ 01.03.2021ರ ಸೋಮವಾರ ಬೆಳಿಗ್ಗೆ 10.30 ಕ್ಕೆ**
**ಶಿರಮಗೊಂಡನಹಳ್ಳಿಯ ಮೃತರ ಸ್ವಗೃಹದಲ್ಲಿ** ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿ ಕೋರಬೇಕಾಗಿ ವಿನಂತಿ.

ಇಂತಿ ದುಃಖತಪ್ತರು : ಕೆ.ಸಿ. ಗಂಗಾಧರ ಹಾಗೂ ಕಂಚುಗಾರನಹಳ್ಳಿ ವಂಶಸ್ಥರು, ಶಿರಮಗೊಂಡನಹಳ್ಳಿ, ಗೌಡ್ರು ವಂಶಸ್ಥರು, ಕುರ್ಕಿ ಹಾಗೂ ಬಂಧು-ಮಿತ್ರರು.

ವಿ.ಸೂ. : ಆಹ್ವಾನ ಪತ್ರಿಕೆ ತಲುಪದವರು ಇದನ್ನೇ ವೈಯಕ್ತಿಕ ಆಹ್ವಾನವೆಂದು ಭಾವಿಸಿ, ಆಗಮಿಸಬೇಕಾಗಿ ವಿನಂತಿ.


## ವಿಭಾಗದ ಉಡಾವಣೆ ಯಶಸ್ವಿ

**(1ನೇ ಪುಟದಿಂದ)** ವಲಯದಲ್ಲಿ ಸುಧಾರಣೆ ತಂದಿರುವುದಕ್ಕಾಗಿ ಅವರ ಚಿತ್ರವನ್ನು ರವಾನಿಸಿರುವುದಾಗಿ ಎಸ್.ಕೆ.ಐ. ತಿಳಿಸಿದೆ. ಎಸ್.ಕೆ.ಐ.ನ ಒಟ್ಟು ಐದು ಉಪಗ್ರಹಗಳನ್ನು ಉಡಾವಣೆ ಮಾಡಲಾಗಿದೆ.

ಪ್ರಧಾನ ಮಂತ್ರಿ ಚಿತ್ರದ ಜೊತೆಗೆ ಎಸ್.ಡಿ. - ಸ್ಯಾಟ್‌ನಲ್ಲಿ 25 ಸಾವಿರ ಜನರ ಹೆಸರುಗಳನ್ನೂ ಉಪಗ್ರಹದ ಮೂಲಕ ಬಾಹ್ಯಾಕಾಶಕ್ಕೆ ರವಾನಿಸಲಾಗಿದೆ.


# ನದಿ ತೀರದಲ್ಲಿ ಸಂಭ್ರಮದ 'ತುಂಗಾರತಿ'



**(1ನೇ ಪುಟದಿಂದ)** ಗುರುಪೀಠದ ಶ್ರೀ ವಾಲ್ಮೀಕಿ ಪ್ರಸನ್ನಾನಂದ ಸ್ವಾಮೀಜಿ, ಕಬೀರಾನಂದ ಆಶ್ರಮದ ಶ್ರೀ ಶಿವಲಿಂಗಾನಂದ ಸ್ವಾಮೀಜಿ, ಮಾದಾರ ಚೆನ್ನಯ್ಯ ಗುರುಪೀಠದ ಶ್ರೀ ಬಸವ ಮೂರ್ತಿ ಚೆನ್ನಯ್ಯ ಸ್ವಾಮೀಜಿ ಸಾನ್ನಿಧ್ಯ ವಹಿಸಿದ್ದರು.

ಮಠದ ಶ್ರೀ ಬಾಲಯೋಗಿ ಜಗದೀಶ್ವರ ಸ್ವಾಮೀಜಿ ಸ್ವಾಗತಿಸಿದರು. ಶಾಸಕ ಅರುಣ್‌ಕುಮಾರ್ ಪೂಜಾರ್ ಪ್ರಾಸ್ತಾವಿಕವಾಗಿ ಮಾತನಾಡಿದರು. ಮಾಜಿ ಸಚಿವ ರುದ್ರಪ್ಪ ಲಮಾಣಿ, ಮಾಜಿ ಶಾಸಕ ಬಿ.ಪಿ. ಹರೀಶ್, ದಾವಣಗೆರೆ ವಿಶ್ವವಿದ್ಯಾಲಯದ ಉಪಕುಲಪತಿ ಪ್ರೊ. ವಿ.ಎಸ್. ಹಲಸೆ, ಹೋರಾಟಗಾರ ಡಿ.ಬಿ. ಹಿರೇಮಠ್, ಸಾಮಾಜಿಕ ಚಿಂತಕ ನಿಖಿತ್‌ರಾಜ್ ಮೌರ್ಯ, ಜಿಲ್ಲಾ ಬಿಜೆಪಿ ಅಧ್ಯಕ್ಷ ಹನಗವಾಡಿ ವೀರೇಶ್, ಚಂದ್ರಶೇಖರ್ ಪೂಜಾರ್, ಪ್ರಾಧ್ಯಾಪಕ ಡಾ. ಹೆಚ್. ವಿಶ್ವನಾಥ್, ಕರವೇ ಜಿಲ್ಲಾಧ್ಯಕ್ಷ ರಾಮೇಗೌಡ ಸೇರಿದಂತೆ ಇನ್ನೂ ಅನೇಕರು ವೇದಿಕೆಯಲ್ಲಿದ್ದರು.

## ರಾಯಪ್ಪ ವಿಶ್ವನಾಥ ರಾಯ್ಕರ್ ನಿಧನ



ದಾವಣಗೆರೆ ಅರುಣಾ ಟಾಕೀಸ್ ಹತ್ತಿರ ಪಿಸಾಳೆ ಕಾಂಪೌಂಡ್ ವಾಸಿ ವಿಶ್ವನಾಥ ರಾಯಪ್ಪ ರಾಯ್ಕರ್ ಇವರ ಪುತ್ರರಾದ ರಾಯಪ್ಪ ವಿಶ್ವನಾಥ ರಾಯ್ಕರ್ (72) ಇವರು ದಿನಾಂಕ 28.02.2021ರ ಭಾನುವಾರ ಸಂಜೆ 6.40 ಕ್ಕೆ ನಿಧನರಾದರು. ಮೃತರು ಮೂವರು ಪುತ್ರರು, ಮೂವರು ಪುತ್ರಿಯರು, ಅಳಿಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 1.3.2021ರ ಸೋಮವಾರ ಮಧ್ಯಾಹ್ನ 1 ಕ್ಕೆ ಪಿ.ಬಿ. ರಸ್ತೆಯಲ್ಲಿರುವ ವೈಕುಂಠಧಾಮದಲ್ಲಿ ನೆರವೇರಲಿದೆ.

# ಮಲೇಬೆನ್ನೂರಿನಲ್ಲಿ ಜೂಜಾಟದ ಮೇಲೆ ದಾಳಿ

> 8 ಮಂದಿ ಬಂಧನ- ಹದಿನೇಳುವರೆ ಸಾವಿರ ನಗದು ವಶ

ದಾವಣಗೆರೆ, ಫೆ.28- ಮಲೇಬೆನ್ನೂರು ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಇಸ್ಪೀಟ್ ಜೂಜಾಟದ ಮೇಲೆ ಪ್ರತ್ಯೇಕ ಎರಡು ಕಡೆ ದಾಳಿ ನಡೆಸಿರುವ ಮಲೇಬೆನ್ನೂರು ಪೊಲೀಸರು 8 ಮಂದಿಯನ್ನು ಬಂಧಿಸಿ, ಹದಿನೇಳುವರೆ ಸಾವಿರ ನಗದು ವಶಪಡಿಸಿಕೊಂಡಿದ್ದಾರೆ.

**ಮೂವರ ಬಂಧನ:** ಹಾಲಿವಾಣ ಗ್ರಾಮದಲ್ಲಿ ನಡೆಯುತ್ತಿದ್ದ ಜೂಜಾಟದ ಮೇಲೆ ದಾಳಿ ನಡೆಸಿ, 3,550 ರೂ. ನಗದು ವಶಪಡಿಸಿಕೊಳ್ಳಲಾಗಿದೆ. ಹರಿಹರ ತಾಲ್ಲೂಕು ಹಾಲಿವಾಣ ಗ್ರಾಮದ ಕೆ. ನಾಗರಾಜ, ನಾಗರಾಜ, ಚನ್ನಗಿರಿ ತಾಲ್ಲೂಕು ಹರಲೀಪುರ ಗ್ರಾಮದ ಬಸವರಾಜ ಬಂಧಿತರು.

**ಐವರ ಬಂಧನ:** ಭಾನುವಳ್ಳಿ ಗ್ರಾಮದಲ್ಲಿ ನಡೆಯುತ್ತಿದ್ದ ಜೂಜಾಟದ ಮೇಲೆ ದಾಳಿ ನಡೆಸಿ, 14 ಸಾವಿರ ರೂ. ನಗದು ವಶಪಡಿಸಿಕೊಳ್ಳಲಾಗಿದೆ. ಭಾನುವಳ್ಳಿಯ ನಾರಾಯಣಪ್ಪ, ಬಿ. ಪ್ರದೀಪ್, ಬನ್ನಿಕೋಡು ಗ್ರಾಮದ ರುದ್ರೇಶ್, ಎಂ.ಎಸ್. ನಟರಾಜ, ಕೆ. ಬೇವಿನಹಳ್ಳಿಯ ವೈ.ಎನ್. ಬಿ. ಬಸವರಾಜ್ ಬಂಧಿತರು.

ದಾವಣಗೆರೆ ಗ್ರಾಮಾಂತರ ಉಪ ವಿಭಾಗದ ಡಿವೈಎಸ್‌ಪಿ ನರಸಿಂಹ ತಾಮ್ರಧ್ವಜ ಅವರ ಮಾರ್ಗದರ್ಶನದಲ್ಲಿ ಹಾಗೂ ಹರಿಹರ ವೃತ್ತ ಸಿಪಿಐ ಯು. ಸತೀಶ್‌ಕುಮಾರ್, ಮಲೇಬೆನ್ನೂರು ಪಿಎಸ್‌ಐ ವೀರಬಸಪ್ಪ ಕುಸಲಾಪುರ ನೇತೃತ್ವದಲ್ಲಿ ಸಿಬ್ಬಂದಿಗಳಾದ ಲಕ್ಷ್ಮಣ್, ಬಸವರಾಜ್, ಸಂತೋಷ್‌ಕುಮಾರ್, ನಾಗಪ್ಪ ಕಡೇಮನಿ, ಮೂರ್ತಿ, ರಾಜಶೇಖರ್, ಮಲ್ಲಿಕಾರ್ಜುನ್, ಹನುಮಂತ ರೆಡ್ಡಿ, ಅಹ್ಮದ್ ಹುಸೇನ್ ಒಳಗೊಂಡ ತಂಡವು ದಾಳಿ ನಡೆಸಿದೆ.

# ತೈಲ, ಅನಿಲ ಬೆಲೆ ಏರಿಕೆ ಖಂಡಿಸಿ ಜಿಲ್ಲಾ ಕಾಂಗ್ರೆಸ್ ಪ್ರತಿಭಟನೆ

**ಸಿಲಿಂಡರ್ ಹೊತ್ತು, ಕಟ್ಟಿಗೆ ಒಲೆ ಹಚ್ಚುವ ಮೂಲಕ ಬಿಜೆಪಿ ಸರ್ಕಾರದ ವಿರುದ್ಧ ಆಕ್ರೋಶ**



ದಾವಣಗೆರೆ, ಫೆ.28- ಪೆಟ್ರೋಲ್, ಡೀಸೆಲ್, ಅಡುಗೆ ಅನಿಲ ಬೆಲೆ ಏರಿಕೆ ಖಂಡಿಸಿ, ನಗರದಲ್ಲಿ ಇಂದು ಜಿಲ್ಲಾ ಕಾಂಗ್ರೆಸ್ ನ ದಕ್ಷಿಣ ವಲಯದ ವತಿಯಿಂದ ಪಕ್ಷದ ಮುಖಂಡರುಗಳ ನೇತೃತ್ವದಲ್ಲಿ ವಿನೂತನವಾಗಿ ಪ್ರತಿಭಟನೆ ನಡೆಸಲಾಯಿತು.

ದಕ್ಷಿಣ ವಲಯದ ಅಧ್ಯಕ್ಷ ಅಯೂಬ್ ಪೈಲ್ವಾನ್ ನೇತೃತ್ವದಲ್ಲಿ ದರ್ಗಾಕ್ಕೆ ತೆರಳಿ ಪೂಜೆ ಸಲ್ಲಿಸಿ, ನಂತರ ವೀರ ಮದಕರಿ ನಾಯಕ ವೃತ್ತ (ಹೊಂಡದ ಸರ್ಕಲ್)ದಲ್ಲಿ ಜಮಾಯಿಸಿದ್ದ ಕಾಂಗ್ರೆಸ್ ನಾಯಕರು, ಕಾರ್ಯಕರ್ತರು ಸಿಲಿಂಡರ್ ಇಟ್ಟು, ಕಟ್ಟಿಗೆ ಒಲೆ ಹಚ್ಚಿ ಅಡುಗೆ ಮಾಡುವುದರ ಮೂಲಕ ಸಿಲಿಂಡರ್ ಬೆಲೆಯನ್ನು ಏರಿಸುತ್ತಾ ಹೋದರೆ ಬಡವರು ಪುನಃ ಕಟ್ಟಿಗೆ ಒಲೆಯಲ್ಲೇ ಅಡುಗೆ ಮಾಡಬೇಕಾದ ಪರಿಸ್ಥಿತಿ ಬರಲಿದೆ ಎಂದು ಕೇಂದ್ರದ ಬಿಜೆಪಿ ಸರ್ಕಾರದ ಬೆಲೆ ಏರಿಕೆಯ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

ನಂತರ ಅಲ್ಲಿಂದ ಬೃಹತ್ ಪ್ರತಿಭಟನಾ ಮೆರವಣಿಗೆ ಮುಖಾಂತರ ನಗರ ದೇವತೆ ದುರ್ಗಾಂಬಿಕಾ ದೇವಸ್ಥಾನದ ಬಳಿ ತೆರಳಿ ಪಾಲಿಕೆ ಸದಸ್ಯ ಜಿ.ಡಿ. ಪ್ರಕಾಶ್ ನೇತೃತ್ವದಲ್ಲಿ ದೇವಿಗೆ ವಿಶೇಷ ಪೂಜೆ ಸಲ್ಲಿಸಿ ಪ್ರತಿಭಟಿಸಿ, ಹೋರಾಟವನ್ನು ಸಂಪನ್ನಗೊಳಿಸಲಾಯಿತು. ಮೆರವಣಿಗೆಯಲ್ಲಿ ಕಾರ್ಯಕರ್ತರು ಸಿಲಿಂಡರ್ ತಲೆ ಮೇಲೆ ಹೊತ್ತು ಸಾಗಿದರು. ಇದಕ್ಕೂ ಮುನ್ನ ಜಿಲ್ಲಾ ಕಾಂಗ್ರೆಸ್ ಮಹಿಳಾ ಘಟಕದ ಅಧ್ಯಕ್ಷೆ ಅನಿತಾಬಾಯಿ ಮಹಾಂತೇಶ್ ಅವರ ನೇತೃತ್ವದಲ್ಲಿ ಶಿವಾಜಿ ಪ್ರತಿಮೆಗೆ ಮಾಲಾರ್ಪಣೆ ಮಾಡಲಾಯಿತು.

ಕಾಂಗ್ರೆಸ್ ಜಿಲ್ಲಾ ಪ್ರಧಾನ ಕಾರ್ಯದರ್ಶಿ ದಿನೇಶ್ ಕೆ. ಶೆಟ್ಟಿ ಮಾತನಾಡಿ, ಜನಸಮಾನ್ಯರಿಗೆ 'ಅಚ್ಛೇ ದಿನ್' ತರುತ್ತೇವೆ ಎಂದು ಹೇಳಿಕೊಂಡು ಕೇಂದ್ರ ಸರ್ಕಾರ ದೇಶದ ಜನರನ್ನು ಸಂಕಷ್ಟಕ್ಕೆ ದೂಡುತ್ತಿದೆ. ಅಗತ್ಯ ವಸ್ತುಗಳ ಬೆಲೆಗಳು ಗಗನಮುಖಿಯಾಗಿದ್ದು ಪೆಟ್ರೋಲ್, ಡೀಸೆಲ್, ಅಡುಗೆ ಅನಿಲ ದರ ಆಕಾಶಕ್ಕೆ ಜಿಗಿದಿವೆ. ಇದು ಅಚ್ಛೇ ದಿನ್ ಅಲ್ಲ 'ಭೂರೇ (ಕೆಟ್ಟ) ದಿನ್' ಎಂದು ಹರಿಹಾಯ್ದರು.

ಉಜ್ವಲ್ ಯೋಜನೆ ಅಡಿ ಮಹಿಳೆಯರಿಗೆ ಅನುಕೂಲವಾಗಲೆಂದು ಉಚಿತ 'ಗ್ಯಾಸ್ ಒಲೆ, ಸಿಲಿಂಡರ್'ಗಳನ್ನು ಕೇಂದ್ರ ಸರ್ಕಾರ ನೀಡಿ, ಅಡುಗೆ ಅನಿಲದ ಬೆಲೆ 800 ದಾಟಿದೆ. ಒಂದು ತಿಂಗಳಲ್ಲೇ ಸತತ ಮೂರು ಬಾರಿ ದರ ಏರಿಕೆ ಮಾಡಲಾಗಿದೆ. ಇದರಿಂದ ಮಹಿಳೆಯರು ಮತ್ತೆ ಸೌದೆ ಒಲೆಯತ್ತ ಅಡುಗೆ ಮಾಡಲು ಮುಖ ಮಾಡಿದ್ದಾರೆ. ಕಾಂಗ್ರೆಸ್ ಸರ್ಕಾರವಿದ್ದಾಗ ಪೆಟ್ರೋಲ್ ಬೆಲೆ 60 ರೂ. ದಾಟಿರಲಿಲ್ಲ. ಈಗ ಮೋದಿ ಸರ್ಕಾರದಲ್ಲಿ ಶತಕ ಬಾರಿಸಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಕಾಂಗ್ರೆಸ್ ದಕ್ಷಿಣ ವಲಯದ ಅಧ್ಯಕ್ಷ ಆಯೂಬ್ ಪೈಲ್ವಾನ್ ಮಾತನಾಡಿ, ಹಿಂದುತ್ವದ ಹೆಸರು ಹೇಳಿಕೊಂಡು ಅಧಿಕಾರ ಹಿಡಿದ ಬಿಜೆಪಿ ಗೋಡ್ಸೆ ಹಿಂದುತ್ವವಾದ ಅನುಸರಿಸುತ್ತಿದೆ. ಆದರೆ, ಕಾಂಗ್ರೆಸ್ ವಿವೇಕಾನಂದರ ಹಿಂದುತ್ವದ ಹಾದಿಯಲ್ಲಿದೆ. ಕೇಂದ್ರ ಮತ್ತು ರಾಜ್ಯದಲ್ಲಿನ ಬಿಜೆಪಿ ನೇತೃತ್ವದ ಸರ್ಕಾರಗಳು ತೈಲ, ಸಿಲಿಂಡರ್ ಬೆಲೆ ಏರಿಕೆ ಮಾಡುವುದರ ಮೂಲಕ ಬಡವರ ಹೊಟ್ಟೆ ಮೇಲೆ ಹೊಡೆಯುತ್ತಿವೆ. ಮನ್ ಕೀ ಬಾತ್ ನಲ್ಲಿ ರೈತರ ಪರವಾಗಿ ಮೋದಿ ಎಲ್ಲೂ ಧ್ವನಿ ಎತ್ತಿಲ್ಲ. ಬಡವರು, ರೈತರಿಗೆ ಅನ್ಯಾಯ ಮಾಡಿದ ಸರ್ಕಾರಗಳಿಗೆ ಉಳಿಗಾಲವಿಲ್ಲ. ಬಿಜೆಪಿ ಸರ್ಕಾರ ಹೀಗೆಯೇ ಬೆಲೆ ಏರಿಕೆ ಮಾಡುತ್ತಾ ಜನ ಮತ್ತು ರೈತ ವಿರೋಧಿ ನೀತಿ ಅನುಸರಿಸಿದರೆ ಜನರೇ ತಕ್ಕಪಾಠ ಕಲಿಸಲಿದ್ದಾರೆ ಎಂದು ಗುಡುಗಿದರು.

ನಗರ ಪಾಲಿಕೆ ವಿರೋಧ ಪಕ್ಷದ ನಾಯಕ ಎ. ನಾಗರಾಜ್ ಮಾತನಾಡಿ, ಕೇಂದ್ರ ಸರ್ಕಾರವು ತೈಲ ಮತ್ತು ಸಿಲಿಂಡರ್ ಬೆಲೆ ಏರಿಕೆ ಮಾಡುವುದರ ಮೂಲಕ ಜನಸಾಮಾನ್ಯರಿಗೆ ಬಿಸಿ ತಟ್ಟಿದೆ. ಈ ಹಿನ್ನೆಲೆಯಲ್ಲಿ ಜನರು ಬಿಜೆಪಿಗೆ ಮತ ನೀಡಿ ಪಶ್ಚಾತ್ತಾಪ ಪಡುತ್ತಿದ್ದಾರೆ. ಮುಂದಿನ ದಿನಗಳಲ್ಲಿ ಬಿಜೆಪಿಗೆ ತಕ್ಕ ಪಾಠ ಕಲಿಸಲಿದ್ದಾರೆ. ಬಿಜೆಪಿಯ ಜನವಿರೋಧಿ ನೀತಿ ಖಂಡಿಸಿ, ಜನರನ್ನು ಜಾಗೃತಗೊಳಿಸುವ ನಿಟ್ಟಿನಲ್ಲಿ ಪಾಲಿಕೆಯ 45 ವಾರ್ಡ್‌ಗಳಲ್ಲೂ ಕೂಡ ಪ್ರತಿಭಟನೆ ನಡೆಸುತ್ತೇವೆ ಎಂದು ಎಚ್ಚರಿಸಿದರು.

ಪ್ರತಿಭಟನೆಯಲ್ಲಿ ಪಾಲಿಕೆ ಸದಸ್ಯರಾದ ವಿನಾಯಕ ಪೈಲ್ವಾನ್, ಚಮನ್ ಸಾಬ್, ಸುಧಾ ಇಟ್ಟಿಗುಡಿ ಮಂಜುನಾಥ್, ಮುಖಂಡರಾದ ಗೌಡ್ರು ಚನ್ನಬಸಪ್ಪ, ಎಲ್.ಎಂ.ಹೆಚ್. ಸಾಗರ್, ಡೋಲಿ ಚಂದ್ರು, ಮುಜಾಹಿದ್ದೀನ್, ಸೈಯದ್ ಚಾರ್ಲಿ, ದ್ರಾಕ್ಷಾಯಣಮ್ಮ ಸೇರಿದಂತೆ ಅನೇಕರು ಭಾಗವಹಿಸಿದ್ದರು.

## ಚಿಕ್ಕಬಳ್ಳಾಪುರದಲ್ಲಿ ಜಿಲೆಟಿನ್ ಸ್ಫೋಟ : ಎನ್.ಜಿ.ಟಿ. ತನಿಖೆ

ನವದೆಹಲಿ, ಫೆ. 28 – ಕರ್ನಾಟಕದ ಚಿಕ್ಕಬಳ್ಳಾಪುರದಲ್ಲಿ ಜಿಲೆಟಿನ್ ಸ್ಫೋಟಿಸಿ ಸಾವುಗಳು ಸಂಭವಿಸಿದ ಬಗ್ಗೆ ತನಿಖೆ ನಡೆಸಲು ರಾಷ್ಟ್ರೀಯ ಹಸಿರು ನ್ಯಾಯಾಧೀಕರಣ (ಎನ್.ಜಿ.ಟಿ.) ಆರು ಸದಸ್ಯರ ಸಮಿತಿಯೊಂದನ್ನು ರಚಿಸಿದೆ.

ಎನ್.ಜಿ.ಟಿ. ಅಧ್ಯಕ್ಷ ನ್ಯಾಯಮೂರ್ತಿ ಎ.ಕೆ. ಗೋಯಲ್ ಅವರ ನೇತೃತ್ವದ ಪೀಠ ಘಟನೆಯ ಕುರಿತು ಮಾಧ್ಯಮಗಳಲ್ಲಿ ಬಂದಿರುವ ವರದಿಗಳನ್ನು ಪರಿಗಣಿಸಿದ್ದು, ಕೇಂದ್ರ ಮಾಲಿನ್ಯ ನಿಯಂತ್ರಣ ಮಂಡಳಿ, ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಕರ್ನಾಟಕ ಗಣಿ ನಿರ್ದೇಶಕರು ಹಾಗೂ ಚಿಕ್ಕಬಳ್ಳಾಪುರ ಜಿಲ್ಲಾಧಿಕಾರಿಗಳಿಗೆ ನೋಟಿಸ್ ಕಳಿಸಿದೆ.

ಘಟನೆಯ ತನಿಖೆಗಾಗಿ ಮಾಲಿನ್ಯ ನಿಯಂತ್ರಣ ಮಂಡಳಿ, ಚಿಕ್ಕಬಳ್ಳಾಪುರದ ಜಿಲ್ಲಾಧಿಕಾರಿ, ಕೈಗಾರಿಕಾ ಇಲಾಖೆ ಹಾಗೂ ಗಣಿ ಇಲಾಖೆಯ ಅಧಿಕಾರಿಗಳನ್ನು ಒಳಗೊಂಡ ಆರು ಸದಸ್ಯರ ಸಮಿತಿಯನ್ನು ರಚಿಸಿರುವುದಾಗಿ ಎನ್.ಜಿ.ಟಿ. ಪೀಠ ತಿಳಿಸಿದೆ. ಒಂದು ವಾರದಲ್ಲಿ ಸಮಿತಿ ಘಟನಾ ಸ್ಥಳಕ್ಕೆ ಭೇಟಿ ನೀಡಬೇಕು ಹಾಗೂ ಘಟನೆಗೆ ಕಾರಣವೇನು ಎಂಬ ಬಗ್ಗೆ ವರದಿ ಸಲ್ಲಿಸಬೇಕು ಎಂದು ತಿಳಿಸಲಾಗಿದೆ.

## ಪೆಟ್ರೋಲಿಯಂ ಉತ್ಪನ್ನ ಜಿ.ಎಸ್.ಟಿ.ಗೆ ತರಲು ಆರ್ಥಿಕ ಸಲಹೆಗಾರರ ಬೆಂಬಲ

ಕೊಲ್ಕೊತಾ, ಫೆ. 28 – ಪೆಟ್ರೋಲಿಯಂ ಉತ್ಪನ್ನಗಳನ್ನು ಜಿ.ಎಸ್.ಟಿ. ವ್ಯಾಪ್ತಿಗೆ ತರಬೇಕೆಂಬ ಪ್ರಸ್ತಾಪಕ್ಕೆ ಮುಖ್ಯ ಆರ್ಥಿಕ ಸಲಹೆಗಾರ ಕೆ.ವಿ. ಸುಬ್ರಮಣ್ಯಂ ಬೆಂಬಲಿಸಿದ್ದಾರೆ.

ಆದರೆ, ಈ ಬಗ್ಗೆ ಜಿ.ಎಸ್.ಟಿ. ಮಂಡಳಿ ನಿರ್ಧಾರ ತೆಗೆದುಕೊಳ್ಳಬೇಕು ಎಂದು ತಿಳಿಸಿದ್ದಾರೆ.

ಜಿ.ಎಸ್.ಟಿ.ಗೆ ಸೇರ್ಪಡೆ ಮಾಡುವುದು ಒಳ್ಳೆಯ ಹೆಜ್ಜೆ. ಆದರೆ, ಈ ಬಗ್ಗೆ ಜಿ.ಎಸ್.ಟಿ. ಮಂಡಳಿಯೇ ನಿರ್ಧಾರ ತೆಗೆದುಕೊಳ್ಳಬೇಕು ಎಂದು ಎಫ್.ಐ.ಸಿ.ಸಿ.ಐ. ಎಫ್.ಎಲ್.ಒ. ಸದಸ್ಯರ ಜೊತೆ ಸಂವಾದ ನಡೆಸುತ್ತಿದ್ದ ಅವರು ಹೇಳಿದ್ದಾರೆ.

ಪೆಟ್ರೋಲಿಯಂ ಉತ್ಪನ್ನಗಳನ್ನು ಜಿ.ಎಸ್.ಟಿ. ವ್ಯಾಪ್ತಿಗೆ ತರಬೇಕು ಎಂದು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರಿಗೆ ಪೆಟ್ರೋಲಿಯಂ ಸಚಿವ ಧರ್ಮೇಂದ್ರ ಪ್ರಧಾನ್ ಒತ್ತಾಯಿಸಿದ್ದರು.

## 'ಚಾಯ್‌ವಾಲಾ' ಮೋದಿಗೆ ಕಾಂಗ್ರೆಸ್ ನಾಯಕ ಆಜಾದ್ ಪ್ರಶಂಸೆ

ಜಮ್ಮು, ಫೆ. 28 – ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರನ್ನು ಹೊಗಳಿರುವ ಕಾಂಗ್ರೆಸ್ ಹಿರಿಯ ನಾಯಕ ಗುಲಾಂ ನಬಿ ಆಜಾದ್, ಪ್ರಧಾನಿಗೆ ತಮ್ಮ ಹಿನ್ನೆಲೆ ಬಗ್ಗೆ ಅಭಿಯಾನವಿದೆ ಹಾಗೂ ತಾವು ಚಹಾ ಮಾರುತ್ತಿದ್ದ ದಿನಗಳನ್ನು ದಿಟ್ಟವಾಗಿ ಹೇಳಿಕೊಳ್ಳುತ್ತಾರೆ ಎಂದಿದ್ದಾರೆ.

ಗುಜ್ಜಾರ್ ದೇಶ್ ಚಾರಿಟೆಬಲ್ ಟ್ರಸ್ಟ್ ಆಯೋಜಿಸಿದ್ದ ಸಭೆಯಲ್ಲಿ ಮಾತನಾಡುತ್ತಿದ್ದ ಅವರು, ವ್ಯಕ್ತಿಗಳು ತಮ್ಮ ಹಿನ್ನೆಲೆಯನ್ನು ಜನರಿಂದ ಮುಚ್ಚಿಡಬಾರದು ಎಂದಿದ್ದಾರೆ.

ನಾನೂ ಸಹ ಹಳ್ಳಿಯಿಂದ ಬಂದವನು ಹಾಗೂ ಆ ಬಗ್ಗೆ ಹೆಮ್ಮೆ ಇದೆ. ಪ್ರಧಾನ ಮಂತ್ರಿ ನಾನು ಹಳ್ಳಿಯವನು ಹಾಗೂ ಚಹಾ ಮಾರುತ್ತಿದ್ದೆ ಎಂದು ಹೇಳುತ್ತಾರೆ. ಇಂಥವರನ್ನು ನಾನು ಬಹಳ ಮೆಚ್ಚುತ್ತೇನೆ ಎಂದಿದ್ದಾರೆ.

ಮೋದಿ ಜೊತೆ ನನಗೆ ರಾಜಕೀಯ ಭಿನ್ನಾಭಿಪ್ರಾಯ ಇರಬಹುದು. ಆದರೆ, ಅವರು ಚಾಯ್‌ವಾಲಾ ಎಂದು ಹೆಮ್ಮೆಯಿಂದ ಹೇಳಿಕೊಳ್ಳುತ್ತಾರೆ ಎಂದವರು ತಿಳಿಸಿದ್ದಾರೆ. ನಿನ್ನೆಯಷ್ಟೇ ಆಜಾದ್ ಸೇರಿದಂತೆ 'ಜಿ-23' ಬಂಡಾಯ ನಾಯಕರು ಕಾಂಗ್ರೆಸ್ ದುರ್ಬಲವಾಗಿದೆ ಹಾಗೂ ನಾಯಕತ್ವ ಬದಲಾಗಬೇಕು ಎಂದು ಹೇಳಿದ್ದರು.

ಆಜಾದ್ ರಾಜ್ಯಸಭೆಯಿಂದ ನಿವೃತ್ತರಾದ ಸಂದರ್ಭದಲ್ಲಿ ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ಮುಕ್ತ ಕಂಠದಿಂದ ಪ್ರಶ್ನಿಸಿದ್ದರಲ್ಲದೇ, ಒಂದು ಹಂತದಲ್ಲಿ ಭಾವುಕರೂ ಆಗಿದ್ದರು.

## ಗಾಯಗೊಂಡು ನರಳಾಡುತ್ತಿದ್ದ ಕೋತಿಗೆ ಚಿಕಿತ್ಸೆ ಕೊಡಿಸಿದ ಶಿಕ್ಷಕ ಗಿರೀಶ್



**ಮಲೇಬೆನ್ನೂರು**

ಮಲೇಬೆನ್ನೂರು. ಫೆ 28 - ಗಾಯಗೊಂಡು ನರಾಳಾಡುತ್ತಿದ್ದ ಕೋತಿಯೊಂದನ್ನು ಕಂಡ ಶಿಕ್ಷಕ ಗಿರೀಶ್ ಗಂಟೇರ್ ಅವರು ತಕ್ಷಣ ಸಂಬಂಧಪಟ್ಟ ಇಲಾಖೆಗಳಿಗೆ ತಿಳಿಸಿ ಚಿಕಿತ್ಸೆ ಕೊಡಿಸುವ ಮೂಲಕ ಮಾನವೀಯತೆ ಮೆರೆದಿದ್ದಾರೆ.

ಇಲ್ಲಿನ ಅಂಚೆ ಕಛೇರಿ ಇರುವ ಕಟ್ಟಡದ ಮೇಲೆ ಗಾಯಗೊಂಡು ಕುಳಿತಿದ್ದ ಕೋತಿಯನ್ನು ಗಮನಿಸಿದ ಶಿಕ್ಷಕ ಗಿರೀಶ್ ಅವರು ಅದಕ್ಕೆ ನೀರು ಆಹಾರ ನೀಡಿದ್ದಾರೆ.

ನಂತರ ಪೊಲೀಸ್ ಹಾಗೂ ಅರಣ್ಯ ಇಲಾಖೆಗಳಿಗೆ ವಿಷಯ ತಿಳಿಸಿದಾಗ ಅರಣ್ಯ ಇಲಾಖೆಯ ಮಾಲತೇಶ್, ಸದಾನಂದ್, ರಜಾಕ್ ಸಾಬ್ ಅವರು ಪುರಸಭೆಯ ಪರಿಸರ ಇಂಜಿನಿಯರ್ ಉಮೇಶ್, ಆರೋಗ್ಯ ನಿರೀಕ್ಷಕ ನವೀನ್ ಅವರೊಂದಿಗೆ ಸ್ಥಳಕ್ಕೆ ಆಗಮಿಸಿ, ಗಾಯಗೊಂಡಿದ್ದ ಕೋತಿಯನ್ನು ಸುರಕ್ಷಿತವಾಗಿ ಹಿಡಿದು ಪಶು ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಿ ಸಲಾಯಿತು. ಡಾ.ಬಿ.ಎಸ್. ತೇಲಗಾರ್ ಅವರು ಕೋತಿಯನ್ನು ಬೋನಿನಲ್ಲಿ ಇಟ್ಟುಕೊಂಡು ಚಿಕಿತ್ಸೆ ನೀಡುವ ಜವಾಬ್ದಾರಿ ತೆಗೆದುಕೊಂಡಿದ್ದಾರೆ.

# ಮಹಾಪೌರರು ಕನ್ನಡಿಗರ ಧ್ವನಿಯಾಗಿ ನಿಲ್ಲಲಿ

**ಕರವೇಯಿಂದ ಏರ್ಪಡಿಸಿದ್ದ ಮಹಾಪೌರರ ಅಭಿನಂದನಾ ಸಮಾರಂಭದಲ್ಲಿ ರಾಮೇಗೌಡ ಆಶಯ**



ದಾವಣಗೆರೆ, ಫೆ. 28- ಹೋರಾಟಗಾರನಿಗೆ, ಪ್ರಾಮಾಣಿಕತೆ ಮತ್ತು ನಿಷ್ಠೆಯಿಂದಿರುವವರಿಗೆ ಸ್ಥಾನಮಾನ ಸಿಗುತ್ತದೆಂದರೆ ಅದು ವೀರೇಶ್ ಅವರಿಗೆ ಸಿಕ್ಕ ಮಹಾಪೌರರ ಸ್ಥಾನ. ಇನ್ನು ಮುಂದೆ ಕನ್ನಡ ಪರವಾದ ನಿಲುವುಗಳನ್ನು ತೆಗೆದುಕೊಳ್ಳಲಿ. ಕನ್ನಡಿಗರ ಧ್ವನಿಯಾಗಿ ನಿಲ್ಲಲಿ ಎಂದು ಕರವೇ ಜಿಲ್ಲಾಧ್ಯಕ್ಷ ಎಂ.ಎಸ್. ರಾಮೇಗೌಡ ಆಶಯ ವ್ಯಕ್ತಪಡಿಸಿದರು.

ಅವರು, ಕರ್ನಾಟಕ ರಕ್ಷಣಾ ವೇದಿಕೆ ವತಿಯಿಂದ ನೂತನವಾಗಿ ಆಯ್ಕೆಯಾಗಿರುವ ಮಹಾನಗರಪಾಲಿಕೆಯ ಮಹಾಪೌರ ಎಸ್.ಟಿ. ವೀರೇಶ್ ಅವರಿಗೆ ಏರ್ಪಡಿಸಿದ್ದ ಅಭಿನಂದನಾ ಸಮಾರಂಭದಲ್ಲಿ ಮಾತನಾಡುತ್ತಾ, ನಗರದ ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಬರುವ ಅಂಗಡಿಯ ನಾಮಫಲಕಗಳು ಆಂಗ್ಲ ಭಾಷೆಯಲ್ಲಿ ಮತ್ತು ಜಾಹೀರಾತು ಫಲಕಗಳು ರಾರಾಜಿಸುತ್ತಿವೆ. ತಕ್ಷಣ ನಗರಪಾಲಿಕೆ ಸರ್ಕಾರದ ಆದೇಶದಂತೆ ಶೇಕಡ 70ರಷ್ಟು ಕನ್ನಡದಲ್ಲಿ ಬರೆಸುವಂತೆ ನಿರ್ದೇಶನ ನೀಡಬೇಕೆಂದು ಒತ್ತಾಯಿಸಿದರು.

ಜೊತೆಗೆ ನಗರದ ಡಾಕ್ಟರ್ ಮೋದಿ ವೃತ್ತದ ಬಳಿ ಇರುವ ಬೀದಿ ವ್ಯಾಪಾರಸ್ಥರು, ಶಾಮನೂರು ರಸ್ತೆಯಲ್ಲಿರುವ ಬೀದಿ ವ್ಯಾಪಾರಿಗಳು ಪಾದಚಾರಿ ವ್ಯಾಪಾರಿಗಳನ್ನು ಒಕ್ಕಲು ಎಬ್ಬಿಸುತ್ತಿರುವ ಆಯುಕ್ತರ ಮತ್ತು ಪೊಲೀಸರ ಕ್ರಮವನ್ನು ಖಂಡಿಸಿದರು. ಪಾದಚಾರಿಗಳಿಗೆ ಫುಡ್ ಕೋರ್ಟ್ ನಿರ್ಮಾಣ ಮಾಡುವಂತೆ ಒತ್ತಾಯಿಸಿದರು. ಫುಡ್ ಕೋರ್ಟ್ ನಿರ್ಮಾಣವಾಗುವವರೆಗೆ ಮತ್ತೆ ಸ್ಥಳಗಳಲ್ಲಿ ವ್ಯಾಪಾರ ನಡೆಸಲು ಅನುವು ಮಾಡಿಕೊಡಬೇಕಾಗಿ ರಾಮೇಗೌಡ ವಿನಂತಿಸಿದರು.

ಇದಕ್ಕೆ ಸ್ಪಂದಿಸಿದ ಮಹಾಪೌರ ಎಸ್.ಟಿ. ವೀರೇಶ್, ತಕ್ಷಣ ಆಯುಕ್ತರು ಮತ್ತು ನಿಮ್ಮೊಂದಿಗೆ ಸೇರಿಸಿ ಫುಡ್ ಕೋರ್ಟ್ ಕಟ್ಟಿಸಿಕೊಡಲು ಕ್ರಮ ಕೈಗೊಳ್ಳುತ್ತೇನೆ ಎಂದು ತಿಳಿಸಿದರು. ಇದರ ಜೊತೆಗೆ ನಾವೆಲ್ಲರೂ ಕನ್ನಡಿಗರಾಗಿ ಬದುಕಬೇಕು. ನಗರದಲ್ಲಿ ಯಾವುದೇ ಸಂಘ ಸಂಸ್ಥೆಯಾಗಲೀ ಬ್ಯಾಂಕ್ ಆಗಲೀ ವ್ಯಾಪಾರಸ್ಥರಾಗಲೀ ಸರ್ಕಾರದ ಆದೇಶದಂತೆ ಶೇ. 70ರಷ್ಟು ಕನ್ನಡದ ನಾಮಫಲಕಗಳನ್ನು ಬಳಸುವವರ ಜೊತೆಗೆ ಕನ್ನಡದಲ್ಲಿ ವ್ಯವಹರಿಸುವಂತೆ ತಿಳಿಸಿದರು.

ಇದಕ್ಕೂ ಸ್ಪಂದಿಸದ ಸಂಘ ಸಂಸ್ಥೆಯಾಗಲೀ ಬ್ಯಾಂಕ್ ಆಗಲೀ ವ್ಯಾಪಾರಸ್ಥರ ಮೇಲೆ ಕ್ರಮ ಕೈಗೊಳ್ಳಲಾಗುವುದೆಂದು ವೀರೇಶ್ ತಿಳಿಸಿದರು.

ಈ ಸಂದರ್ಭದಲ್ಲಿ ಕರವೇ ಪಾದಚಾರಿ ವ್ಯಾಪಾರಿ ಘಟಕದ ಅಧ್ಯಕ್ಷ ಸುರೇಶ್, ಉಪಾಧ್ಯಕ್ಷ ರಾಘವೇಂದ್ರ ಧೀರೇಂದ್ರ, ಮಂಜುನಾಥ್, ಬಸವ ರಾಜ್, ಪ್ರಕಾಶ್, ರಾಜಪ್ಪ, ಕರಿಬಸಪ್ಪ ರಾಕೇಶ್, ಚಂದ್ರು, ಕೈಲಾಸ್, ದಾದಾಪೀರ್, ರಮೇಶ್, ಅಣ್ಣಪ್ಪ, ಕೊಟ್ರೇಶ್ ಜಾಫರ್, ಸಾಗರ್, ಗಣೇಶ್, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಮಲ್ಲಿಕಾರ್ಜುನ್, ಕೆ.ಜಿ. ಬಸವರಾಜ್, ನಗರ ಘಟಕ ಅಧ್ಯಕ್ಷ ಹನುಮಂತಪ್ಪ, ಮಹಿಳಾ ಘಟಕದ ಅಧ್ಯಕ್ಷರಾದ ಶ್ರೀಮತಿ ಬಸಮ್ಮ, ಸಾಕಮ್ಮ, ಸರೋಜಮ್ಮ, ಭಾಗ್ಯಮ್ಮ, ಸಾವಿತ್ರಮ್ಮ, ಅನುಸೂಯಮ್ಮ, ಮಹೇಂದ್ರ ಮತ್ತಿತರರು ಉಪಸ್ಥಿತರಿದ್ದರು.

## ಓಟಿಎಸ್ ಯೋಜನೆಯಲ್ಲಿ ಸಾಲ ಮರುಪಾವತಿಗಾಗಿ ರೈತರ ಒತ್ತಾಯ



**ರಾಣೇಬೆನ್ನೂರು**

ರಾಣೇಬೆನ್ನೂರು, ಫೆ. 28- ಓ ಟಿ ಎಸ್ ಯೋಜನೆಯಲ್ಲಿ ರೈತರ ಸಾಲದ ಹಣ ತುಂಬಿಸಿಕೊಳ್ಳುವಂತೆ ಒತ್ತಾಯಿಸಿ ಮಾಕನೂರ ಯೂನಿಯನ್ ಬ್ಯಾಂಕ್ ಮ್ಯಾನೇಜರ್ ಮೂಲಕ ಹಿರಿಯ ಅಧಿಕಾರಿಗಳಿಗೆ ರೈತ ಮುಖಂಡರುಗಳಾದ ರವೀಂದ್ರಗೌಡ ಪಾಟೀಲ ಹಾಗೂ ಈರಣ್ಣ ಹಲಗೇರಿ ಅವರುಗಳು ಮನವಿ ಸಲ್ಲಿಸಿದರು.

ದೇಶಾದ್ಯಂತ ಎಲ್ಲ ಬ್ಯಾಂಕ್‌ಗಳಲ್ಲಿ ಓ ಟಿ ಎಸ್ ಯೋಜನೆ ಅನ್ವಯ ರೈತರಿಂದ ಸಾಲದ ಹಣ ತುಂಬಿಸಿಕೊಂಡು ಅವರನ್ನು ಋಣಮುಕ್ತರನ್ನಾಗಿಸುತ್ತಿದ್ದು, ಯೂನಿಯನ್ ಬ್ಯಾಂಕ್‌ನವರು ಈ ಯೋಜನೆ ನಮ್ಮ ಬ್ಯಾಂಕ್‌ನಲ್ಲಿಲ್ಲ ಎಂದು ಹೇಳಿ ರೈತರನ್ನು ಮರಳಿ ಕಳಿಸುತ್ತಿದ್ದಾರೆ.

ನೈಸರ್ಗಿಕ ವಿಕೋಪಕ್ಕೆ ಸಿಲುಕಿ ನರುಳುತ್ತಿರುವ ರೈತರು ತಮ್ಮ ಸಂಕಷ್ಟದ ಸಮಯದಲ್ಲೂ ಸಹ ಸಾಲದಿಂದ ಋಣಮುಕ್ತರಾಗಬೇಕೆಂದು ಹಂಬಲಿಸುವ ಯೂನಿಯನ್ ಬ್ಯಾಂಕ್ ಕಟ್ ಬಾಕಿ ಸಾಲಗಾರ ರೈತರಿಗೆ ಬ್ಯಾಂಕಿನ ಹಿರಿಯ ಅಧಿಕಾರಿಗಳು ಸ್ಪಂದಿಸಬೇಕು ಹಾಗೂ ಸರ್ಕಾರ ಬ್ಯಾಂಕಿಗೆ ಸೂಕ್ತ ಆದೇಶ ನೀಡಬೇಕು ಎಂದು ಒತ್ತಾಯಿಸಿದ ಮನವಿ ಪತ್ರವನ್ನು ಡೆಪ್ಯುಟಿ ಮತ್ತು ಅಸಿಸ್ಟೆಂಟ್ ಜನರಲ್ ಮ್ಯಾನೇಜರ್‌ಗಳಿಗೆ ಹಾಗೂ ತಹಶೀಲ್ದಾರ್ ಮೂಲಕ ಸರ್ಕಾರಕ್ಕೆ ಕಳುಹಿಸಿದರು.

## ಇಂದು ಚರ್ಚಾ ಸ್ಪರ್ಧೆ

ದಾವಣಗೆರೆ ವನಿತಾ ಸಮಾಜದ ವತಿಯಿಂದ ವಿಶ್ವ ಮಹಿಳಾ ದಿನಾಚರಣೆ ಮತ್ತು ವನಿತಾ ಸಮಾಜದ ವಾರ್ಷಿಕೋತ್ಸವದ ಅಂಗವಾಗಿ ವಿವಿಧ ಸ್ಪರ್ಧೆಗಳನ್ನು ಏರ್ಪಡಿಸಲಾಗಿದೆ. ವಿವಿಧ ಸಂಸ್ಥೆಗಳ ಸದಸ್ಯೆಯರು, ಮಹಿಳಾ ಸಂಘ-ಸಂಸ್ಥೆಗಳ ಪದಾಧಿಕಾರಿಗಳು, ಸದಸ್ಯರು ಭಾಗವಹಿಸಬಹುದು.

ಇಂದು ಮಧ್ಯಾಹ್ನ 3 ಕ್ಕೆ ವನಿತಾ ಸಮಾಜದ ಸಭಾಂಗಣದಲ್ಲಿ 'ಕೊರೊನಾ ಮಹಾಮಾರಿ ಅವಧಿಯಲ್ಲಿ ಸಮಾಜದಲ್ಲಿ ಆದ ಬದಲಾವಣೆ' ಕುರಿತು ಚರ್ಚಾ ಸ್ಪರ್ಧೆ ಏರ್ಪಡಿಸಲಾಗಿದೆ.

## ಜಿಲ್ಲೆಗೆ ಇಂದು ಉಸ್ತುವಾರಿ ಸಚಿವರು

ನಗರಾಭಿವೃದ್ಧಿ ಹಾಗೂ ದಾವಣಗೆರೆ ಜಿಲ್ಲಾ ಉಸ್ತುವಾರಿ ಸಚಿವ ಬಿ.ಎ ಬಸವರಾಜ್ ಅವರು ಇಂದು ಬೆಳಿಗ್ಗೆ ಶಿವಮೊಗ್ಗದಿಂದ ಹೊರಟು ಬೆಳಿಗ್ಗೆ 10.30ಕ್ಕೆ ಚನ್ನಗಿರಿ ತಾಲ್ಲೂಕಿನ ಸಂತೇಬೆನ್ನೂರು ಹೋಬಳಿಯ ತಣಿಗೆರೆ ಗ್ರಾಮದಲ್ಲಿ ಜರುಗುವ ಜನಸ್ಪಂದನ ಕಾರ್ಯಕ್ರಮದಲ್ಲಿ ಭಾಗವಹಿಸುವರು. ಮಧ್ಯಾಹ್ನ 3 ಗಂಟೆಗೆ ಹೊನ್ನಾಳಿಗೆ ತೆರಳಿ, ಮುಖ್ಯಮಂತ್ರಿಯವರ ರಾಜಕೀಯ ಕಾರ್ಯದರ್ಶಿ ಹಾಗೂ ಹೊನ್ನಾಳಿ ಶಾಸಕ ಎಂ.ಪಿ. ರೇಣುಕಾಚಾರ್ಯ ಅವರ ಹುಟ್ಟುಹಬ್ಬದ ಆಚರಣೆಯಲ್ಲಿ ಪಾಲ್ಗೊಳ್ಳುವರು.

## ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದ ಅಧ್ಯಕ್ಷರ ಜಿಲ್ಲಾ ಪ್ರವಾಸ

ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ ನಿಯಮಿತದ ಅಧ್ಯಕ್ಷ ಆರ್.ರಘು ಅವರು, ಇಂದು ಬೆಳಿಗ್ಗೆ 10 ಕ್ಕೆ ದಾವಣಗೆರೆ ಜಿಲ್ಲೆಯ ನಿಗಮದ ಜಿಲ್ಲಾ ವ್ಯವಸ್ಥಾಪಕರೊಂದಿಗೆ ನಿಗಮದ ವಿವಿಧ ಯೋಜನೆಗಳ ಅನುಷ್ಠಾನ, ಪ್ರಗತಿ ಹಾಗೂ ಸಾಲ ವಸೂಲಾತಿ ಇವುಗಳ ಕುರಿತು ಪ್ರಗತಿ ಪರಿಶೀಲನಾ ಸಭೆಯಲ್ಲಿ ಪಾಲ್ಗೊಳ್ಳುವರು. ಬೆಳಿಗ್ಗೆ 11 ಗಂಟೆಗೆ ಪತ್ರಿಕಾಗೋಷ್ಠಿಯಲ್ಲಿ ಪಾಲ್ಗೊಳ್ಳುವರು. ಮಧ್ಯಾಹ್ನ 12 ಕ್ಕೆ ಹಿಂದುಳಿದ ವರ್ಗಗಳ ಮುಖಂಡರ ಜೊತೆ ಸಂವಾದ ನಡೆಸುವರು. ಮಧ್ಯಾಹ್ನ 2 ಕ್ಕೆ ಹೊನ್ನಾಳಿಗೆ ತೆರಳುವರೆಂದು ಪ್ರಕಟಣೆ ತಿಳಿಸಿದೆ.

## ಇಂದು ಕಾಂತೇಶ ರಥ

ಬ್ಯಾಡಗಿ ತಾಲ್ಲೂಕು ಕದರ ಮಂಡಲಗಿ ಶ್ರೀ ಆಂಜನೇಯ (ಕಾಂತೇಶ) ಸ್ವಾಮಿ ರಥೋತ್ಸವ ಇಂದು ನೆರವೇರಲಿದೆ ನಂತರ ಓಕುಳಿ ಕಾರ್ಯಕ್ರಮ ವಿದೆ ಎಂದು ದೇವಸ್ಥಾನ ಪಂಚಕಮಿಟಿ ತಿಳಿಸಿದೆ.




# ರಾಜ್ಯ ಸರ್ಕಾರಿ ನೌಕರರ ಪ್ರತಿಭಟನೆ



ದಾವಣಗೆರೆ, ಫೆ.28- ರಾಜ್ಯ ಸರ್ಕಾರಿ ನೌಕರರ 18 ತಿಂಗಳ ತುಟ್ಟಿಭತ್ಯೆ ರದ್ದುಗೊಳಿಸಿರುವುದು, ಖಾಲಿ ಹುದ್ದೆ ಭರ್ತಿ ಮಾಡದಿರುವುದನ್ನು ಖಂಡಿಸಿ ಅಖಿಲ ರಾಜ್ಯ ಸರ್ಕಾರಿ ನೌಕರರ ಒಕ್ಕೂಟದ ಜಿಲ್ಲಾ ಘಟಕದ ನೇತೃತ್ವದಲ್ಲಿ ಪ್ರತಿಭಟನೆ ನಡೆಸಲಾಯಿತು. ನಂತರ ಜಿಲ್ಲಾಧಿಕಾರಿಗಳ ಮುಖಾಂತರ ಮುಖ್ಯಮಂತ್ರಿ ಅವರಿಗೆ ಮನವಿ ಸಲ್ಲಿಸಿದರು.

ರಾಜ್ಯ ಸರ್ಕಾರಿ ನೌಕರರು ಕೋವಿಡ್ ಹಿನ್ನೆಲೆಯಲ್ಲಿ ಹೆಚ್ಚಿನ ಒತ್ತಡದಲ್ಲಿ ಹೊಸ ಸವಾಲುಗಳನ್ನು ಎದುರಿಸುತ್ತಿರುವ ಈ ಸಂದರ್ಭದಲ್ಲಿ ನೌಕರರ 18 ತಿಂಗಳ ತುಟ್ಟಿಭತ್ಯೆ ರದ್ದುಗೊಳಿಸಿರುವುದು, ಖಾಲಿ ಹುದ್ದೆ ಭರ್ತಿ ಮಾಡದಿರುವುದು, ಕೇಂದ್ರ ಸರ್ಕಾರದ ಕಡ್ಡಾಯ ನಿವೃತ್ತಿ ಕುರಿತ ಆದೇಶ ಮುಂತಾದ ಕ್ರಮಗಳಿಂದ ನೌಕರರು ಮತ್ತಷ್ಟು ಸಂಕಷ್ಟಕ್ಕೀಡಾಗಿದ್ದಾರೆ.

ರಾಜ್ಯದ 7 ಕೋಟಿ ಜನತೆಗೆ ಜಾರಿಯಾಗುವ ವಿವಿಧ ಯೋಜನೆಗಳನ್ನು ಜಾರಿಗೊಳಿಸಲು 7.73 ಲಕ್ಷ ಮಂಜೂರಾದ ಹುದ್ದೆಗಳ ಪೈಕಿ ಕಾರ್ಯನಿರ್ವಹಿಸುತ್ತಿರುವವರ ಸಂಖ್ಯೆ ಕೇವಲ 5.20 ಲಕ್ಷ ಭರ್ತಿಯಾಗದೇ ಖಾಲಿ ಉಳಿದ ಹುದ್ದೆಗಳು 2.50 ಲಕ್ಷಕ್ಕೂ ಹೆಚ್ಚಿವೆ. 2016ರಲ್ಲಿ ಸುಪ್ರೀಂ ಕೋರ್ಟ್ ಆದೇಶವಿದ್ದರೂ ರಾಜ್ಯದಲ್ಲಿ ದಿನಗೂಲಿ, ಹೊರಗುತ್ತಿಗೆ ನೌಕರರಿಗೆ 'ಸಮಾನ ಕೆಲಸಕ್ಕೆ ಸಮಾನ ವೇತನ' ಒದಗಿಸಿಲ್ಲ ಎಂದು ಆರೋಪಿಸಿದರು.

2016ರ ಸುಪ್ರೀಂ ಕೋರ್ಟ್ ತೀರ್ಪಿನ ಅನುಸಾರ ದಿನಗೂಲಿ, ಹೊರಗುತ್ತಿಗೆ ನೌಕರರಿಗೆ ಸಮಾನ ಕೆಲಸಕ್ಕೆ ಸಮಾನ ವೇತನ ನೀಡಬೇಕು ಹಾಗೂ ಖಾಲಿ ಇರುವ ಹುದ್ದೆಗಳನ್ನು ಶೀಘ್ರವಾಗಿ ನೇರ ನೇಮಕಾತಿ ಮೂಲಕ ಭರ್ತಿ ಮಾಡಬೇಕೆಂದು ಒತ್ತಾಯಿಸಿದರು.

ಪ್ರತಿಭಟನೆಯಲ್ಲಿ ರಾಜ್ಯಾಧ್ಯಕ್ಷ ನಟರಾಜ್, ಜಿಲ್ಲಾಧ್ಯಕ್ಷ ಮಲ್ಲಿಕಾರ್ಜುನ ಸ್ವಾಮಿ, ಜಿಲ್ಲಾ ಖಜಾಂಚಿ ಗೋವಿಂದರಾಜು, ತಾಲ್ಲೂಕು ಅಧ್ಯಕ್ಷ ರೇವಣ ಸಿದ್ದಪ್ಪ, ತಾಲ್ಲೂಕು ಪ್ರಧಾನ ಕಾರ್ಯದರ್ಶಿ ರಂಗೇಶ್, ಪದಾಧಿಕಾರಿಗಳಾದ ಬಸವರಾಜ್, ಅಶ್ಪಕ್ ಖಾನ್, ಹರೀಶ್, ಹನುಮಂತಪ್ಪ, ದೇವರಾಜು, ವೀರಯ್ಯ, ಉಮೇಶ್, ರೇವಣಸಿದ್ದಪ್ಪ ಸೇರಿದಂತೆ ಜಿಲ್ಲಾ ಮತ್ತು ತಾಲ್ಲೂಕು ಪದಾಧಿಕಾರಿಗಳು ಭಾಗವಹಿಸಿದ್ದರು.

# ನಗರದಲ್ಲಿ ಇಂದು, ನಾಳೆ ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನ

ದಾವಣಗೆರೆ ಜಿಲ್ಲಾ 10ನೇ ಕನ್ನಡ ಸಾಹಿತ್ಯ ಸಮ್ಮೇಳನ ಇಂದು, ನಾಳೆ ವಿದ್ಯಾನಗರ ರಸ್ತೆಯಲ್ಲಿರುವ ಕುವೆಂಪು ಕನ್ನಡ ಭವನದಲ್ಲಿ ನಡೆಯಲಿದೆ.

ಇಂದು ಬೆಳಿಗ್ಗೆ 8.30 ಕ್ಕೆ ರಾಷ್ಟ್ರ ಧ್ವಜಾರೋಹಣವನ್ನು ಶ್ರೀಮತಿ ಕೆ.ವಿ. ಶಾಂತಕುಮಾರಿ ಶಶಿಧರ ಹಾಗೂ ಪರಿಷತ್ತಿನ ಧ್ವಜಾರೋಹಣವನ್ನು ಡಾ. ಹೆಚ್.ಎಸ್. ಮಂಜುನಾಥ ಕುರ್ಕಿ ಹಾಗೂ ನಾಡ ಧ್ವಜಾರೋಹಣವನ್ನು ಎಸ್.ಟಿ.ವೀರೇಶ್ ನೆರವೇರಿಸುವರು. ಕಾರ್ಯಕ್ರಮದಲ್ಲಿ ಮುದೇಗೌಡ್ರ ಗಿರೀಶ್, ನಾಗರಾಜ ಲೋಕಿಕೆರೆ, ನೀಲಕಂಠಪ್ಪ ಎಸ್, ಬೆಳವನೂರು ನಾಗರಾಜಪ್ಪ ಉಪಸ್ಥಿತರಿರುವರು.

ಬೆಳಿಗ್ಗೆ 9.30 ಕ್ಕೆ ಸಮ್ಮೇಳನಾಧ್ಯಕ್ಷರ ಮೆರವಣಿಗೆ ನಡೆಯಲಿದ್ದು, ಹನುಮಂತಪ್ಪ ಮೆರವಣಿಗೆ ಉದ್ಘಾಟಿಸುವರು. ಉಪಸ್ಥಿತಿ : ಗೀತಾ ದಿಳ್ಯಪ್ಪ, ವೀಣಾ ನಂಜಪ್ಪ, ಎಸ್.ಬಿ. ರುದ್ರಗೌಡ, ರವಿ ಸಿ.ಬಿ, ಹಾಲೇಶಪ್ಪ ಡಿ.ಡಿ, ಡಿ.ಎಂ. ಮಂಜುನಾಥಯ್ಯ, ಡಿ. ರಾಮಪ್ಪ, ರಾಜಶೇಖರ್ ಗುಂಡಗಟ್ಟಿ, ನಾರಾಯಣ ರಜಪೂತ್, ಕೆ.ಜಿ. ಭರತ್‌ರಾಜ್, ಪ್ರೊ. ಸಿ.ಹೆಚ್. ಮುರಿಗೇಂದ್ರಪ್ಪ, ಬಾಡದ ಆನಂದರಾಜ್, ಡಾ. ಬಿ.ಎಸ್. ನಾಗಪ್ರಕಾಶ್, ಹೆಚ್.ಎನ್. ಶಿವಕುಮಾರ್, ತೆಲಿಗೆ ರುದ್ರೇಶ್, ಮಹೇಶ್ವರಯ್ಯ ಎಸ್.ಎಂ, ಹೆಗ್ಗೇರೆ ರಂಗಪ್ಪ, ಶಶಿಧರ ಹೆಮ್ಮನಬೇತೂರು, ಬೆಳ್ಳೂಡಿ ಶಿವಕುಮಾರ್, ಎ. ಮಹಾಲಿಂಗಪ್ಪ, ಶಿವಕುಮಾರ್ ಕೋಗಲೂರು, ಎಂ. ತಿಪ್ಪಣ್ಣ ಯಕ್ಕನಹಳ್ಳಿ, ಜಿ.ಡಿ. ಗುರುಸ್ವಾಮಿ, ಜಿ.ಎನ್. ರುದ್ರಪ್ಪ ಯಕ್ಕನಹಳ್ಳಿ.



ಪುಸ್ತಕ ಮಳಿಗೆಗಳ ಉದ್ಘಾಟನೆಯನ್ನು ಸಿ.ಆರ್. ಪರಮೇಶ್ವರಪ್ಪ, ಚಿತ್ರಕಲಾ ಪ್ರದರ್ಶನ ಉದ್ಘಾಟನೆಯನ್ನು ಹೆಚ್.ಕೆ. ಲಿಂಗರಾಜ್ ಉದ್ಘಾಟಿಸುವರು. ದಾವಣಗೆರೆ ಜಿಲ್ಲಾ ಚಿತ್ರಕಲಾ ಶಿಕ್ಷಕರ ಸಂಘದ ವತಿಯಿಂದ ಚಿತ್ರಕಲಾ ಪ್ರದರ್ಶನ ಏರ್ಪಡಿಸಲಾಗಿದೆ.

ಬೆಳಿಗ್ಗೆ 11 ಗಂಟೆಗೆ ಉದ್ಘಾಟನಾ ಸಮಾರಂಭ ನಡೆಯುವುದು. ಅಧ್ಯಕ್ಷತೆ : ಎಸ್.ಎ. ರವೀಂದ್ರನಾಥ್, ಉದ್ಘಾಟನೆ : ನಾಡೋಜ ಡಾ. ಮನು ಬಳಿಗಾರ್, ಡಾ. ಜಿ.ಎಸ್. ಶಿವರುದ್ರಪ್ಪ ವೇದಿಕೆ ಉದ್ಘಾಟನೆ : ಭೈರತಿ ಬಸವರಾಜ್. ಕೃತಿಗಳ ಬಿಡುಗಡೆ : ಜಿ.ಎಂ. ಸಿದ್ದೇಶ್ವರ, ಡಾ. ಶಾಮನೂರು ಶಿವಶಂಕರಪ್ಪ. ಸಮ್ಮೇಳನಾಧ್ಯಕ್ಷರು : ಎನ್. ಟಿ. ಯರ್ರಿಸ್ವಾಮಿ. ಕನ್ನಡ ಧ್ವಜ ಹಸ್ತಾಂತರ : ಡಾ. ಲೋಕೇಶ್ ಅಗಸನಕಟ್ಟೆ. ಮುಖ್ಯ ಅತಿಥಿಗಳು : ಎಂ.ಪಿ. ರೇಣುಕಾಚಾರ್ಯ, ಕೆ. ಮಾಡಾಳ್ ವಿರುಪಾಕ್ಷಪ್ಪ, ಎಸ್.ವಿ. ರಾಮಚಂದ್ರ, ಪ್ರೊ. ಎನ್. ಲಿಂಗಣ್ಣ, ಎಸ್. ರಾಮಪ್ಪ, ಮಹಾಂತೇಶ್ ಬೀಳಗಿ, ವಿಜಯ ಮಹಾಂತೇಶ್ ಬಿ. ದಾನಮ್ಮನವರ್, ವಿಶ್ವನಾಥ ಮುದಜ್ಜಿ, ಎನ್.ಕೆ. ನಾರಾಯಣ, ಎ.ಆರ್. ಉಜ್ಜಿನಪ್ಪ. ಪ್ರಾಸ್ತಾವಿಕ ನುಡಿ : ಡಾ. ಎಚ್.ಎಸ್. ಮಂಜುನಾಥ ಕುರ್ಕಿ. ಸಮ್ಮೇಳನಾಧ್ಯಕ್ಷರ ಪರಿಚಯ : ಡಾ. ಪ್ರಕಾಶ್ ಹಲಗೇರಿ. ಅಧ್ಯಕ್ಷರಿಗೆ ಗೌರವ ಸಮರ್ಪಣೆ : ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಮತ್ತು 10ನೇ ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನ ಸಮಿತಿ.

ಮಧ್ಯಾಹ್ನ 2 ಗಂಟೆಗೆ ಗೋಷ್ಠಿ-1 ರಲ್ಲಿ ಕನ್ನಡ ಕಾವ್ಯ ಮತ್ತು ವಿಶ್ವ ಮಾನವ ಪ್ರಜ್ಞೆ ಕುರಿತು ಮಾತನಾಡಲಾಗುವುದು. ಅಧ್ಯಕ್ಷತೆ : ಡಾ. ಎಂ.ಜಿ. ಈಶ್ವರಪ್ಪ, ಡಾ. ದಾದಾಪೀರ್ ನವಿಲೇಹಾಳ್, ಡಾ. ಎ.ಬಿ. ರಾಮಚಂದ್ರಪ್ಪ, ಪ್ರೊ. ಸಿ.ವಿ. ಪಾಟೀಲ್. ಸ್ವಾಗತ : ಬಿ. ವಾಮದೇವಪ್ಪ. ನಿರೂಪಣೆ : ರೇವಣಸಿದ್ದಪ್ಪ ಅಂಗಡಿ. ವಂದನಾರ್ಪಣೆ : ಮಂಜುನಾಥ ಇ.ಎಂ.

ಮಧ್ಯಾಹ್ನ 3.30 ಕ್ಕೆ ಗೋಷ್ಠಿ-2 ರಲ್ಲಿ ಸಾಹಿತ್ಯ ಮತ್ತು ಸಾಂಸ್ಕೃತಿಕ ನೆಲೆಗಳು ವಿಷಯ ಕುರಿತು ಮಾತನಾಡಲಾಗುವುದು. ಅಧ್ಯಕ್ಷತೆ : ಪ್ರೊ. ಭಿಕ್ಷಾವರ್ತಿಮಠ, ಡಾ. ಆನಂದ ಋಗ್ವೇದಿ, ಡಾ. ಹೆಚ್.ಎಲ್. ಪುಷ್ಪಾ. ಸ್ವಾಗತ : ಎಂ.ಯು. ಚನ್ನಬಸಪ್ಪ. ನಿರೂಪಣೆ : ನಾಗರಾಜ್ ಕಾಕನೂರು. ವಂದನಾರ್ಪಣೆ : ಬಿ.ವಿ. ರಾಜಶೇಖರ್.

ಸಂಜೆ 5 ಗಂಟೆಗೆ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯುವವು. ಅಧ್ಯಕ್ಷತೆ : ರವಿಚಂದ್ರ. ಉದ್ಘಾಟನೆ : ಬಿ. ಪಾಲಾಕ್ಷಿ. ಮುಖ್ಯ ಅತಿಥಿಗಳು : ಬಿ.ಎನ್. ಗಿರೀಶ್.

## ಸೇಲಂ ಓಪನ್ ಕರಾಟೆ ಚಾಂಪಿಯನ್ ಶಿಪ್ : ನಿಧಿ ಬೇತೂರ್ ತೃತೀಯ



ದಾವಣಗೆರೆ, ಫೆ.28- ಸೇಲಂ ಡಿಸ್ಟ್ರಿಕ್ಟ್ ಕರಾಟೆ ಅಸೋಸಿಯೇಷನ್, ಶಿಶೋಕೈ ಕರಾಟೆ ಅಕಾಡೆಮಿ ವತಿಯಿಂದ ತಮಿಳುನಾಡಿನ ಸೇಲಂನಲ್ಲಿ ಇತ್ತೀಚೆಗೆ ಆಯೋಜಿಸಿದ್ದ ರಾಷ್ಟ್ರಮಟ್ಟದ ಸೇಲಂ ಓಪನ್ ಕರಾಟೆ ಚಾಂಪಿಯನ್ ಶಿಪ್‌ನಲ್ಲಿ ನಗರದ ನಿಧಿ ಬೇತೂರು 13 ವರ್ಷದೊಳಗಿನ ವಿಭಾಗದಲ್ಲಿ ಸ್ಪರ್ಧಿಸಿ ತೃತೀಯ ಸ್ಥಾನ ಗಳಿಸಿ ಕಂಚಿನ ಪದಕ ಪಡೆದಿದ್ದಾಳೆ.

ಕೆ.ಪಿ.ಜೋಸ್ ಅವರಿಂದ ತರಬೇತಿ ಪಡೆದಿರುವ ನಿಧಿ, ನಗರದ ಅಭಿಷೇಕ್ ಬೇತೂರು ಹಾಗೂ ಶ್ವೇತಾ ದಂಪತಿ ಪುತ್ರಿ.

## ಕಸಾಪ ಜಿಲ್ಲಾ ಸಮ್ಮೇಳನಾಧ್ಯಕ್ಷರಾಗಿ ಎನ್.ಟಿ. ಯರ್ರಿಸ್ವಾಮಿ : ಸ್ವಾಗತಾರ್ಹ

ದಾವಣಗೆರೆ, ಫೆ.28- ದಾವಣಗೆರೆ ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷರನ್ನಾಗಿ ಕೆನರಾ ಬ್ಯಾಂಕ್ ನಿವೃತ್ತ ಅಧಿಕಾರಿ ಎನ್.ಟಿ. ಯರ್ರಿಸ್ವಾಮಿ ಅವರನ್ನು ಆಯ್ಕೆ ಮಾಡಿರುವುದು ನಮ್ಮೆಲ್ಲರಿಗೆ ಹರ್ಷ ಉಂಟು ಮಾಡಿದೆ ಮತ್ತು ಸ್ವಾಗತಾರ್ಹ ಎಂದು ಕೆನರಾ ಬ್ಯಾಂಕ್ ನಿವೃತ್ತ ಅಧಿಕಾರಿಗಳ ಒಕ್ಕೂಟದ ಕ್ಷೇತ್ರೀಯ ಕಾರ್ಯದರ್ಶಿ ಹೆಚ್. ನಾಗರಾಜ್ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಎನ್.ಟಿ. ಯರ್ರಿಸ್ವಾಮಿ ಅವರು ಸುಮಾರು 40 ವರ್ಷಗಳ ಕಾಲ ಬ್ಯಾಂಕಿಂಗ್ ಕ್ಷೇತ್ರದಲ್ಲಿ ಸಾರ್ಥಕ ಸೇವೆ ಸಲ್ಲಿಸಿದ್ದಾರೆ. ಅದರಂತೆ ಸಾಹಿತ್ಯ ಕ್ಷೇತ್ರಕ್ಕೂ ಅಪಾರ ಕೊಡುಗೆ ನೀಡಿದ್ದಾರೆ ಎಂದರು.

ವೃತ್ತಿ ಜತೆಗೆ ಸಾಹಿತ್ಯ ಕ್ಷೇತ್ರದಲ್ಲಿ ಆಸಕ್ತಿ ಹೊಂದಿ 18 ಕೃತಿಗಳನ್ನು ಪ್ರಕಟಿಸಿದ ಹೆಗ್ಗಳಿಕೆ ಅವರದ್ದು. ಇದೀಗ ಅವರನ್ನು ಜಿಲ್ಲಾ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರನ್ನಾಗಿ ಗುರುತಿಸಿರುವುದು ಬ್ಯಾಂಕಿಂಗ್ ಕ್ಷೇತ್ರದ ಸಹೋದ್ಯೋಗಿಗಳಿಗೆ ಹರ್ಷ ತಂದಿದೆ ಎಂದು ತಿಳಿಸಿದರು.

ಒಕ್ಕೂಟದ ಜಿಲ್ಲಾಧ್ಯಕ್ಷ ಬಿ. ಮಲ್ಲಿಕಾರ್ಜುನಪ್ಪ, ರಾಮಚಂದ್ರಯ್ಯ ಸುದ್ದಿಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

## ಗೋವಿನಹಾಳು ಗ್ರಾಮದ ಸರ್ಕಾರಿ ಶಾಲೆಯಲ್ಲಿ ಪೋಷಕರ ಸಭೆ



**ಮಲೇಬೆನ್ನೂರು**

ಮಲೇಬೆನ್ನೂರು ಫೆ.28 - ಕೊರೊನಾ ಕಾರಣ ಸ್ಥಗಿತವಾಗಿದ್ದ ತರಗತಿಯನ್ನು ಸರ್ಕಾರದ ಆದೇಶದಂತೆ ಪ್ರಾರಂಭಿಸಿದ್ದು, ಪೋಷಕರು ಮಕ್ಕಳನ್ನು ಶಾಲೆಗೆ ಕಳುಹಿಸಿ ಎಂದು ಗುಚ್ಛ ಸಂಪನ್ಮೂಲ ವ್ಯಕ್ತಿ ಕೆ.ಆರ್ ಬಸವರಾಜಯ್ಯ ಕೋರಿದರು.

ಗೋವಿನಹಾಳು ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಶಾಲಾಭಿವೃದ್ಧಿ ಸಮಿತಿ ನೇತೃತ್ವದಲ್ಲಿ ನಡೆದ ಪೋಷಕರ ಸಭೆ ಉದ್ದೇಶಿಸಿ ಅವರು ಮಾತನಾಡಿದರು. ಈ ಭಾಗದಲ್ಲಿ ಕೊರೊನಾ ಪ್ರಕರಣ ಪತ್ತೆಯಾಗಿಲ್ಲ. ಶಾಲೆಗೆ ಬರುವ ಮುನ್ನ ಮಾಸ್ಕ್ ಧರಿಸುವುದು ಕಡ್ಡಾಯ. ಮಕ್ಕಳ ನಡುವೆ ಅಂತರ ಕಾಪಾಡಲಾಗುವುದು. ಶಾಲೆ ಆವರಣ ಸ್ಯಾನಿಟೈಸ್ ಮಾಡಿ ಸ್ವಚ್ಛತೆಗೆ ಒತ್ತು ನೀಡಲಾಗಿದೆ.

ಭಯ ಆತಂಕ ಬಿಟ್ಟು ಮಕ್ಕಳಿಗೆ ಬಿಸಿಯಾದ ಆಹಾರ ನೀಡಿ ಶಾಲೆಗೆ ಕಳುಹಿಸಿ. ಒಂದು ವೇಳೆ ಜ್ವರ ಶೀತ ಕೆಮ್ಮು ಕಂಡು ಬಂದರೆ ವೈದ್ಯರ ಸಲಹೆ ಪಡೆಯಿರಿ ಎಂದರು.

ಕರ್ನಾಟಕ ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ರಾಜ್ಯ ಉಪಾಧ್ಯಕ್ಷ ಎಸ್. ಸಿದ್ದಪ್ಪ ಮಾತನಾಡಿ, ಶಾಲಾರಂಭವಾಗಿದೆ. ಎಸ್.ಡಿ.ಎಂ.ಸಿ. ಸದಸ್ಯರು ಪೋಷಕರ ಮನವೊಲಿಸಿ ಮಕ್ಕಳನ್ನು ಕರೆತನ್ನಿ ಎಂದರು.

ಎಸ್.ಡಿ.ಎಂ.ಸಿ. ಅಧ್ಯಕ್ಷ ನಾಗರಾಜ್ ಮಾತನಾಡಿ, ಶಾಲಾರಂಭವಾಗಿರುವುದು ಉತ್ತಮ ನಿರ್ಧಾರ, ಮಕ್ಕಳನ್ನು ಕರೆತಂದು ಸಹಕಾರ ನೀಡುವ ಭರವಸೆ ನೀಡಿದರು. ಮುಖಂಡ ಲಿಂಗನಗೌಡ, ಸದಸ್ಯರು, ಶಾಲಾ ಸಿಬ್ಬಂದಿ, ಪೋಷಕರು, ಮಕ್ಕಳು ಇದ್ದರು.

## ನಗರದಲ್ಲಿಂದು ಗುರುವಂದನೆ

ನಗರದ ಹೊಂಡದ ರಸ್ತೆ, ಸರ್ಕಾರಿ ಮಾದರಿ ಹಿರಿಯ ಪಾಠ ಶಾಲೆ - 1987-1988ನೇ ಸಾಲಿನ ವಿದ್ಯಾರ್ಥಿಗಳ ಸಂಘದಿಂದ ಇಂದು ಸಂಜೆ 5.30 ಕ್ಕೆ ನಗರದ ರೋಟರಿ ಬಾಲಭವನದಲ್ಲಿ ಈ ಶಾಲೆಯ ಶಿಕ್ಷಕರಾದ ಆರ್. ನಾಗರತ್ನಮ್ಮ, ಇ.ಕೆ. ಗಿರಿಜಾಂಬ, ಹಂಪಕ್ಕ, ಬಿ. ಕರಿಬಸಮ್ಮ ಇವರುಗಳಿಗೆ ಗುರುವಂದನೆ ಮಾಡಲಿದ್ದಾರೆ. ನಂತರ ಶಿಕ್ಷಕರಿಗೆ ಸನ್ಮಾನ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ವಿದ್ಯಾರ್ಥಿಗಳು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ, ಗುರುಗಳ ಕೃಪೆಗೆ ಪಾತ್ರರಾಗಬೇಕೆಂದು ಕೋರಲಾಗಿದೆ.

## ಕಾಂಗ್ರೆಸ್ ಕಾರ್ಮಿಕ ವಿಭಾಗಕ್ಕೆ ಆಯ್ಕೆ



ದಾವಣಗೆರೆ, ಫೆ.28 - ಜಿಲ್ಲಾ ಕಾಂಗ್ರೆಸ್ ಕಾರ್ಮಿಕ ವಿಭಾಗದ ದಾವಣಗೆರೆ ಉತ್ತರ ವಿಧಾನಸಭಾ ಕ್ಷೇತ್ರದ ನಗರ ಬ್ಲಾಕ್ ಸಮಿತಿಯ ಅಧ್ಯಕ್ಷರಾಗಿ ಡಿ. ಸೈಯದ್ ಇಕ್ಬಾಲ್ ಅವರು ನೇಮಕಗೊಂಡಿದ್ದಾರೆ.

## ವರ್ತುಲ ರಸ್ತೆಗಾಗಿ ಮನೆ, ನಿವೇಶನ ಕಳೆದುಕೊಂಡ ನಿರಾಶ್ರಿತರಿಗೆ ಪರಿಹಾರ ಕೊಡಿ

ದಾವಣಗೆರೆ, ಫೆ.28- ನಗರದಲ್ಲಿ ವರ್ತುಲ ರಸ್ತೆ ನಿರ್ಮಾಣ ಮಾಡುವಾಗ ಮನೆ, ನಿವೇಶನ ಕಳೆದುಕೊಂಡವರಿಗೆ ಕೂಡಲೇ ಪರಿಹಾರ ನೀಡುವಂತೆ ಸಂತ್ರಸ್ತ ವಿ.ಜಿ. ಹನುಮಾನ್ ಸುದ್ದಿಗೋಷ್ಠಿಯಲ್ಲಿ ಒತ್ತಾಯಿಸಿದರು.

120 ಅಡಿ ವರ್ತುಲ (ರಿಂಗ್) ರಸ್ತೆ ನಿರ್ಮಾಣಕ್ಕಾಗಿ ದಾವಣಗೆರೆ-ಹರಿಹರ ನಗರಾಭಿವೃದ್ಧಿ ಪ್ರಾಧಿಕಾರ 1998 ರಲ್ಲಿ ನೋಟಿಸ್ ನೀಡಿ, ಮನೆಗಳನ್ನು ಧ್ವಂಸಗೊಳಿಸಿ, ನಿವೇಶನಗಳನ್ನು ವಶಕ್ಕೆ ಪಡೆದು ರಸ್ತೆ ನಿರ್ಮಿಸಿದೆ. ಇದುವರೆಗೂ ಸಂತ್ರಸ್ತರಿಗೆ ಪರಿಹಾರ ನೀಡಿಲ್ಲ ಎಂದು ಅಳಲು ತೋಡಿಕೊಂಡು, ಭೂಸ್ವಾಧೀನ ಪ್ರಕ್ರಿಯೆಗೆ ಮುಂದಾದ ಸಂದರ್ಭದಲ್ಲಿ 15 ದಿನಗಳಲ್ಲೇ ಪರಿಹಾರ ನೀಡಲು ಭರವಸೆ ನೀಡಿದ್ದರು. ಆದರೂ ಚಕಾರ ಎತ್ತಿಲ್ಲ. 2004 ರಲ್ಲಿ ಹೈಕೋರ್ಟ್ ಮೊರೆ ಹೋಗಿದ್ದೆವು ಎಂದು ತಿಳಿಸಿದರು.

ನ್ಯಾಯಾಲಯ ಕೂಡ 6 ತಿಂಗಳ ಒಳಗೆ ಪರಿಹಾರ ನೀಡುವಂತೆ ಸೂಚನೆ ನೀಡಿತ್ತು. ಜವಾಬ್ದಾರಿಯಿಂದ ನುಣುಚಿಕೊಳ್ಳಲು ಪ್ರತಿ ಚದುರಡಿಗೆ ಕೇವಲ 12 ರೂಗಳು ನಿಗದಿ ಮಾಡಿ ಪರಿಹಾರಕ್ಕೆ ಮುಂದಾಗಿತ್ತು. ಆಗ ಸಂತ್ರಸ್ತರು ಹೆಚ್ಚಿನ ಪರಿಹಾರಕ್ಕಾಗಿ ಪುನಃ ನ್ಯಾಯಾಲಯದ ಮೊರೆ ಹೋಗಿ 150 ರೂ ಗಳ ಪರಿಹಾರ ನೀಡಲು ಸೂಚನೆ ನೀಡಿತ್ತು.

2016 ರಲ್ಲಿ ದೂಡಾ ಕಡಿಮೆ ದರ ನಿಗದಿ ಮಾಡುವಂತೆ ಕೋರಿ ನ್ಯಾಯಾಲಯದ ಮೊರೆಹೋಗಿದೆ. 21 ವರ್ಷಗಳಾದರೂ ಪರಿಹಾರ ನೀಡಿಲ್ಲ. ಈಗಲಾದರೂ 150 ರೂ ನಂತೆ ಪರಿಹಾರ ನೀಡಲು ಮನವಿ ಮಾಡಿದರು.

ಸುದ್ದಿಗೋಷ್ಠಿಯಲ್ಲಿ ಬಿ.ಎಸ್. ರಾಮಶೆಟ್ಟಿ ಶಾರದಮ್ಮ, ಪುಂಡಲೀಕ, ಕರಮಡಿ ಶಾಂತಪ್ಪ, ಕೊಟ್ರಮ್ಮ ಮತ್ತಿತರರು ಇದ್ದರು.

## ಇಂದು ಹರಿಹರದಿಂದ ದಾವಣಗೆರೆಗೆ ಪಾದಯಾತ್ರೆ

**ಬೀರೂರು-ಸಮ್ಮಸಗಿ ರಸ್ತೆ ದುರಸ್ತಿಗೆ ಆಗ್ರಹ**

ದಾವಣಗೆರೆ, ಫೆ.28- ಹರಿಹರ ನಗರ ವ್ಯಾಪ್ತಿಗೆ ಬರುವ ಬೀರೂರು-ಸಮ್ಮಸಗಿ ಹೆದ್ದಾರಿ ದುರಸ್ತಿ ಮಾಡುವಂತೆ ಆಗ್ರಹಿಸಿ ಜಯ ಕರ್ನಾಟಕ ಸಂಘಟನೆ ಹರಿಹರ ಘಟಕದ ವತಿಯಿಂದ ಮಾ. 1 ರಂದು ಬೆಳಿಗ್ಗೆ 10.30 ಕ್ಕೆ ಹರಿಹರದಿಂದ ದಾವಣಗೆರೆ ಡಿ.ಸಿ. ಕಚೇರಿವರೆಗೆ ಪಾದಯಾತ್ರೆ ಹಮ್ಮಿಕೊಳ್ಳಲಾಗಿದೆ ಎಂದು ತಾಲ್ಲೂಕು ಅಧ್ಯಕ್ಷ ಎಸ್. ಗೋವಿಂದ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಹರಿಹರ ನಗರದ ಕೆ.ಇ.ಬಿ ಕಚೇರಿ ಮುಂಭಾಗದಲ್ಲಿ ಬೀರೂರು-ಸಮಸಗಿ ರಸ್ತೆ ಸಂಪೂರ್ಣ ಹದಗೆಟ್ಟಿದ್ದು, ಅನೇಕ ಬಾರಿ ಅಧಿಕಾರಿಗಳ ಗಮನಕ್ಕೆ ತಂದರೂ ಪ್ರಯೋಜನವಾಗಿಲ್ಲ ಎಂದರು.

15 ದಿನಗಳೊಳಗಾಗಿ ಬೇಡಿಕೆಗಳು ಈಡೇರದಿದ್ದರೆ ಜಯ ಕರ್ನಾಟಕ ಸಂಘಟನೆ ವತಿಯಿಂದ ಅನಿರ್ದಿಷ್ಟ ಅವಧಿಯ ಧರಣಿ ಸತ್ಯಾಗ್ರಹವನ್ನು ಜಿಲ್ಲಾಧಿಕಾರಿ ಕಚೇರಿ ಮುಂಭಾಗ ಹಮ್ಮಿಕೊಳ್ಳಲಾಗುವುದು ಎಂದರು.

ಪತ್ರಿಕಾಗೋಷ್ಠಿಯಲ್ಲಿ ಜಯ ಕರ್ನಾಟಕ ಸಂಘಟನೆ ಹರಿಹರ ಘಟಕದ ಪದಾಧಿಕಾರಿಗಳಿದ್ದರು.

## ಶೇ.7 ರಷ್ಟು ಮೀಸಲಾತಿಗೆ ಆಗ್ರಹ

ದಾವಣಗೆರೆ, ಫೆ.28- ಶೈಕ್ಷಣಿಕ, ಆರ್ಥಿಕ ಹಾಗೂ ರಾಜಕೀಯವಾಗಿ ತೀರ ಹಿಂದುಳಿದ ಮುಸ್ಲಿಂ ಸಮುದಾಯಕ್ಕೆ ಶೇ. 7 ರಷ್ಟು ಮೀಸಲಾತಿ ನೀಡುವಂತೆ ಮುಸ್ಲಿಂ ಸಮುದಾಯದ ಮುಖಂಡರಾದ ಸೈಯದ್ ಸೈಫುಲ್ಲಾ ಆಗ್ರಹಿಸಿದರು.

ಈ ಬಗ್ಗೆ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಜ್ಯದಲ್ಲಿ ವೀರಪ್ಪ ಮೊಯ್ಲಿ ಮುಖ್ಯಮಂತ್ರಿಯಾಗಿ ಅಧಿಕಾರ ನಡೆಸಿದ ಸಂದರ್ಭದಲ್ಲಿ ಅಲ್ಪಸಂಖ್ಯಾತರ ಸಮುದಾಯಗಳಿಗೆ ಶೇ. 7 ರಷ್ಟು ಮೀಸಲಾತಿ ನೀಡಿದ್ದರು. ತದನಂತರ ಅಧಿಕಾರಕ್ಕೆ ಬಂದ ದೇವೇಗೌಡರ ಅವಧಿಯಲ್ಲಿ ಮುಸ್ಲಿಂ ಸಮುದಾಯಕ್ಕೆ ಶೇ. 4 ರಷ್ಟು ಮೀಸಲಾತಿ ನಿಗದಿಪಡಿಸಿದರು. ಈಗಿನ ಜನಸಂಖ್ಯೆಗೆ ಹೋಲಿಸಿದರೆ ಮೀಸಲಾತಿ ಸಾಕಾಗುವುದಿಲ್ಲ ಎಂದು ಹೇಳಿದರು.

ಕರ್ನಾಟಕದಲ್ಲಿ ಶೇ. 14 ರಷ್ಟು ಮುಸ್ಲಿಂ ಜನಸಂಖ್ಯೆ ಇದ್ದು, ಸಮುದಾಯ ಹಲವು ಕ್ಷೇತ್ರಗಳಲ್ಲಿ ಹಿಂದುಳಿದಿದೆ. ಮೇಲೆತ್ತಬೇಕಾದರೆ ಹೆಚ್ಚಿನ ಮೀಸಲಾತಿ ನೀಡುವುದು ಅವಶ್ಯವಿದೆ. ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರು ಈ ಬಗ್ಗೆ ಕಾಳಜಿ ವಹಿಸಿ ಶೇ. 7 ಕ್ಕೆ ಮೀಸಲಾತಿ ಹೆಚ್ಚಿಸುವಂತೆ ಮನವಿ ಮಾಡಿದರು.

ಈಗಾಗಲೇ ಜಿಲ್ಲಾಧಿಕಾರಿಗಳ ಮೂಲಕ ರಾಜ್ಯ ಸರ್ಕಾರಕ್ಕೆ ಮನವಿ ಸಲ್ಲಿಸಲಾಗಿದೆ ಎಂದರು.

ಪತ್ರಿಕಾಗೋಷ್ಠಿಯಲ್ಲಿ ವಕೀಲರಾದ ಅನೀಸ್ ಪಾಶ, ಇಮ್ತಿಯಾಜ್ ಹುಸೇನ್, ಆದಿಲ್ ಖಾನ್, ಉಸ್ಮಾನ್ ಅಂಗಡಿ ಉಪಸ್ಥಿತರಿದ್ದರು.

## ಜೆ.ಡಿ.ಎಸ್ ತೊರೆದು ಬಿ.ಜೆ.ಪಿ. ಸೇರ್ಪಡೆ



ದಾವಣಗೆರೆ, ಫೆ.28 - ತಾಲ್ಲೂಕಿನ, ಆನಗೋಡು ಹೋಬಳಿ, ವಡ್ಡೇನಹಳ್ಳಿ ಗ್ರಾಮದ ಜೆ.ಡಿ.ಎಸ್. ಮುಖಂಡ ಕೆ.ಆರ್. ಶಿವಶಂಕರ್, ಕೆ. ಮರುಳಸಿದ್ದಪ್ಪ, ವಿ.ಎಸ್. ಜಯಪ್ರಕಾಶ್, ಇ.ವಿ. ಜಯದೇವ್, ಅವರುಗಳು ಜೆ.ಡಿ.ಎಸ್ ಪಕ್ಷ ತೊರೆದು ಲೋಕಸಭಾ ಸದಸ್ಯ ಜಿ.ಎಂ.ಸಿದ್ದೇಶ್ವರ ಹಾಗೂ ಜಿಲ್ಲಾ ಬಿ.ಜೆ.ಪಿ. ಅಧ್ಯಕ್ಷ ವೀರೇಶ್ ಹನಗವಾಡಿ ಇವರ ನೇತೃತ್ವದಲ್ಲಿ ಭಾರತೀಯ ಜನತಾ ಪಕ್ಷಕ್ಕೆ ಸೇರ್ಪಡೆಗೊಂಡರು.

ಈ ಸಂದರ್ಭದಲ್ಲಿ ಶಾಸಕರೂ, ಬಾಬು ಜಗಜೀವನ ರಾಂ ಕೈಗಾರಿಕಾ ಅಭಿವೃದ್ಧಿ ನಿಗಮದ ಅಧ್ಯಕ್ಷ ಪ್ರೊ|| ಲಿಂಗಣ್ಣ, ಬಯಲು ಸೀಮೆ ಅಭಿವೃದ್ಧಿ ನಿಗಮದ ಅಧ್ಯಕ್ಷ ಅಣಬೇರು ಜೀವನಮೂರ್ತಿ, ಪಿ.ಎಲ್.ಡಿ. ಬ್ಯಾಂಕ್ ನಿರ್ದೇಶಕ ವೈ.ಬಿ. ನಾಗರಾಜ್ ಹಾಗೂ ಇತರರು ಉಪಸ್ಥಿತರಿದ್ದರು.

## ಪಕ್ಷಾತೀತವಾಗಿ ಕೆಲಸ ಮಾಡಿದಾಗ ಮಾತ್ರ ಕ್ಷೇತ್ರದ ಅಭಿವೃದ್ಧಿ ಸಾಧ್ಯ

ಕೂಡ್ಲಿಗಿ, ಫೆ.28- ಕ್ಷೇತ್ರದಲ್ಲಿ ಉತ್ತಮ ಕಾರ್ಯಗಳು ಆಗಬೇಕಾದರೆ ಎಲ್ಲರೂ ಪಕ್ಷಭೇದ ಮರೆತು, ಕೆಲಸ ಮಾಡಿದಾಗ ಮಾತ್ರ ಅಭಿವೃದ್ಧಿ ಸಾಧ್ಯ ಎಂದು ಕೂಡ್ಲಿಗಿ ಶಾಸಕ ಎನ್.ವೈ.ಗೋಪಾಲಕೃಷ್ಣ ಅಭಿಪ್ರಾಯ ವ್ಯಕ್ತಪಡಿಸಿದರು.

ಅವರು ಪಟ್ಟಣದ ಕೊಟ್ಟೂರು ರಸ್ತೆಯಲ್ಲಿರುವ ನೂತನ ವಾಲ್ಮೀಕಿ ಭವನದ ಉದ್ಘಾಟನೆ ಕಾರ್ಯಕ್ರಮದಲ್ಲಿ ಉದ್ಘಾಟನೆ ನೆರವೇರಿಸಿದ ನಂತರ ನಡೆದ ಕಾರ್ಯಕ್ರಮದಲ್ಲಿ ಮಾತನಾಡುತ್ತಿದ್ದರು.

ಕೂಡ್ಲಿಗಿ ತಾಲ್ಲೂಕಿನಲ್ಲಿ ವಾಲ್ಮೀಕಿ ಸಮುದಾಯ ಬಹುಸಂಖ್ಯಾತರಿದ್ದು ಬಹುತೇಕರು ಬಡತನದಿಂದಲೇ ಜೀವನ ನಡೆಸುತ್ತಿದ್ದು, ಇಂತಹ ಸಮುದಾಯಗಳಿಗೆ ವಾಲ್ಮೀಕಿ ಭವನ ಉಪಯೋಗವಾಗಬೇಕು. ಇದಕ್ಕೆ ಸ್ಥಳೀಯ ಸಮಾಜದ ಮುಖಂಡರು ಆಸಕ್ತಿ ತೋರಿ ಸಮುದಾಯ ಭವನವನ್ನು ಸದುದ್ದೇಶಕ್ಕೆ ಬಳಸಿಕೊಳ್ಳಬೇಕೆಂದು ನೆರೆದಿದ್ದ ನೂರಾರು ಯುವಕರಿಗೆ ಕಿವಿಮಾತು ಹೇಳಿದರು.



ಕೂಡ್ಲಿಗಿಯ ವಾಲ್ಮೀಕಿ ಭವನದ ಉದ್ಘಾಟನೆಯಲ್ಲಿ ಶಾಸಕ ಎನ್.ವೈ.ಗೋಪಾಲಕೃಷ್ಣ

ಸಮುದಾಯ ಭವನ ನಿರ್ವಹಣೆಗೆ ಟ್ರಸ್ಟ್ ಮಾಡಿಕೊಳ್ಳಿ. ಇಲ್ಲದಿದ್ದರೆ, ಪಟ್ಟಣ ಪಂಚಾಯ್ತಿ ವ್ಯಾಪ್ತಿಗೆ ನೀಡುವುದರ ಮೂಲಕ, ಸಮುದಾಯ ಭವನ ಸದುಪಯೋಗಪಡಿಸಿಕೊಳ್ಳಿ ಎಂದರು. ನಾನು ಕೆಲಸ ಮಾಡಲು ಸಿದ್ದನಾಗಿದ್ದೇನೆ ನನಗೆ ಸಹಕಾರ ನೀಡಿ ಎಂದು ತಿಳಿಸಿದರು.

ನಾಗರಿಕ ಹಿತರಕ್ಷಣಾ ವೇದಿಕೆ ಅಧ್ಯಕ್ಷ ಕಾವಲ್ಲಿ ಶಿವಪ್ಪನಾಯಕ ಮಾತನಾಡಿದರು.

ಇದೇ ಸಂದರ್ಭದಲ್ಲಿ ಬಂಗಾರು ಹನುಮಂತು ಹಾಗೂ ತಾಲ್ಲೂಕು ಪರಿಶಿಷ್ಟ ವರ್ಗಗಳ ಅಧಿಕಾರಿ ಮೆಹಬೂಬ್ ಭಾಷಾ ಹಾಗೂ ವಾಲ್ಮೀಕಿ ನಾಯಕ ಮಹಾಸಭಾದ ತಾಲ್ಲೂಕು ಅಧ್ಯಕ್ಷ ಸುರೇಶ್ ವಿಕ್ಟರಿ ಮತ್ತಿತರರನ್ನು ಸನ್ಮಾನಿಸಲಾಯಿತು.

ಈ ಸಂದರ್ಭದಲ್ಲಿ ತಾ.ಪಂ.ಅಧ್ಯಕ್ಷೆ ಕೆ.ನಾಗರತ್ನಮ್ಮ ಲಿಂಗಪ್ಪ, ಪ.ಪಂ.ಅಧ್ಯಕ್ಷೆ ಶಾರದಾಬಾಯಿ, ವಾಲ್ಮೀಕಿ ಸಮಾಜದ ಹಿರಿಯ ಮುಖಂಡ ಮಲ್ಲಾಪುರ ಭರಮಪ್ಪ, ಬಿ.ಭೀಮೇಶ್, ಎಂ.ಸೊಲ್ಲಪ್ಪ, ರಾಷ್ಟ್ರೀಯ ಬಿಜೆಪಿ ಸಮಿತಿ ಸದಸ್ಯ ಕೆ.ಎಂ.ತಿಪ್ಪೇಸ್ವಾಮಿ, ಗುತ್ತಿಗೆದಾರ ಗುಂಡುಮುಣಗು ತಿಪ್ಪೇಸ್ವಾಮಿ, ಗುಂಡುಮುಣಗು ಪ್ರಕಾಶ್, ಸುರೇಶ್, ಕೆ.ಹೆಚ್.ವೀರನಗೌಡ, ಜಿಂಕಲ್ ನಾಗಮಣಿ, ಬಸಣ್ಣ, ಹೆಚ್.ರೇವಣ್ಣ, ಜಿ.ಪಾಪನಾಯಕ, ಸರೋಜಾ ಪಾಪಣ್ಣ, ಚಿನ್ನಪ್ಪ, ಮೆಹಬೂಬ್ ಭಾಷಾ, ಉಮಾದೇವಿ, ವಿ.ಗೀತಾ, ಚನ್ನಪ್ಪ, ಬಂಗಾರು ಹನುಮಂತು, ಕೆ.ಶಿವಪ್ಪನಾಯಕ, ಕೆ.ಈಶಪ್ಪ, ಚಂದ್ರು, ಪೂರ್ಯಾನಾಯ್ಕ ಮತ್ತಿತರರು ಉಪಸ್ಥಿತರಿದ್ದರು.


**ಮನೆಗಳು ಮಾರಾಟಕ್ಕಿವೆ**
ವಿನೋಬನಗರ 30x40 ಉತ್ತರ ಮತ್ತು 30x40 ದಕ್ಷಿಣ ಮೇಲೆ ಮೂರು ಮನೆ 15x40 ಉತ್ತರ
ಮನೆ ಕೊಡುವುದಕ್ಕೆ, ತೆಗೆದು ಕೊಳ್ಳುವುದಕ್ಕೆ ಸಂಪರ್ಕಿಸಿ:
99457 02495, ಐಗೂರು ವಿಜಯ್ ಕುಮಾರ್
95911 60520 -ಸುರೇಶ್

**ಸೈಟ್‌ಗಳು ಮಾರಾಟಕ್ಕಿವೆ**
ಜೆ.ಹೆಚ್. ಪಟೇಲ್ ಬಡಾವಣೆಯಲ್ಲಿ, ವಾಜಪೇಯಿ ಲೇಔಟ್‌ನಲ್ಲಿ 40x60 East, 30x40 West, 30x50 East, 30x50 west, 20x30 East
ಐನಳ್ಳಿ ಚನ್ನಬಸಪ್ಪ, ಏಜೆಂಟ್
93410 14130

**ಕರ್ನಾಟಕ ಗೃಹಮಂಡಳಿಯಲ್ಲಿ ಸೈಟ್‌ಗಳು ಮಾರಾಟಕ್ಕಿವೆ**
40x60 South 40 ಅಡಿ ರೋಡಿಗಿದೆ, 30x50 West 60 ಅಡಿರೋಡಿಗಿದೆ, 30x50 South, 30x50 west
ಐನಳ್ಳಿ ಚನ್ನಬಸಪ್ಪ, ಏಜೆಂಟ್
99166 12110

**ಇಂಡಿಪೆಂಡಂಟ್ ಮನೆ ಲೀಜಿಗೆ ಇದೆ**
ಸರಸ್ವತಿ ಬಡಾವಣೆಯ ಜೀವನ್ ಭೀಮ್ ನಗರದಲ್ಲಿ 30x40 2BHK ಉತ್ತರ ದಿಕ್ಕಿನ ಹೊಸ ಮನೆ 11ಲಕ್ಷ (ಬ್ರೋಕರ್‌ಗಳಿಗೆ ಅವಕಾಶವಿಲ್ಲ)
99023 83936
82172 14069

**ಸೈಟ್‌ಗಳು ಮಾರಾಟಕ್ಕಿವೆ**
ಶಿವ ಪಾರ್ವತಿ ಬಡಾವಣೆಯಲ್ಲಿ 30x50 ಪೂರ್ವ, ಡಾಲರ್ಸ್ ಕಾಲೋನಿಯಲ್ಲಿ 30x50 ಪೂರ್ವ, ಜೆ.ಹೆಚ್ ಪಟೇಲ್ ಬಡಾವಣೆಯಲ್ಲಿ 30x40 ಉತ್ತರ
ಸ್ವಾಮಿ ಏಜೆಂಟ್ ವಿದ್ಯಾನಗರ
97421 44715

**ನೆಲ ಮಂಗಲದ ತರಳಬಾಳು ನಗರದಲ್ಲಿ ಸೈಟು ಖರೀದಿಗೆ ಬೇಕಾಗಿದೆ.**
ಕಿರಣ್ ಬೂಸ್ನೂರ್ (ಏಜೆಂಟ್)
98440-63409

**ಮನೆಗಳು ಮಾರಾಟಕ್ಕಿವೆ**
40x60 North 3 ಬೆಡ್‌ರೂಂ ಕುವೆಂಪು ಬಡಾವಣೆಯಲ್ಲಿ, ಡಿ.ಸಿ.ಎಂ ಲೇಔಟ್‌ನಲ್ಲಿ 30x40 South, 30x50 West 3 ಬೆಡ್‌ರೂಂ ಹೈಟೆಕ್ ಲೇಔಟ್‌ನಲ್ಲಿ
ಐನಳ್ಳಿ ಚನ್ನಬಸಪ್ಪ, ಏಜೆಂಟ್
99166 12110

**ವಾಹನ ಚಾಲಕರು ಬೇಕಾಗಿದ್ದಾರೆ**
ಸಂಪರ್ಕಿಸಿ :
ಮೊ. : 94492 66133
94488 39229

**ಡಾ|| ಸೋಮಶೇಖರ್. ಎಸ್.ಎ.**
Rheumatologist ಇವರು ದಿ. 04.03.2021ರ ಗುರುವಾರ ಮತ್ತು 05.03.2021ರ ಶುಕ್ರವಾರದಂದು ದಾವಣಗೆರೆಯಲ್ಲಿ ಲಭ್ಯವಿರುತ್ತಾರೆ.
ಅನುಗ್ರಹ ಆಸ್ಪತ್ರೆ
ಎಂ.ಸಿ.ಸಿ. 'ಬಿ' ಬ್ಲಾಕ್, ದಾವಣಗೆರೆ.
08192-222292

**WANTED**
ಸೇವಾ ಸಿಂಧೂ ಮತ್ತು ಡಿಟಿಪಿ ಕೆಲಸಕ್ಕಾಗಿ ಬೇಕಾಗಿದ್ದಾರೆ. 1 ವರ್ಷ ಅನುಭವವುಳ್ಳ, ಕಂಪ್ಯೂಟರ್ ಜ್ಞಾನ ಹೊಂದಿರಬೇಕು. Timing 10 to 7 Pm. Salary 6000 to 8000/-
ನ್ಯೂ ಆರ್‌ಟಿಓ ಆಫೀಸ್ ಹತ್ತಿರ, ಕೊಂಡಜ್ಜಿ ರಸ್ತೆ, ದಾವಣಗೆರೆ.
81976 33555

**PG ಅಥವಾ Distribution Material Stock ಮಾಡಿಕೊಳ್ಳಲು**
3000 ಚ ಅಡಿ ಖಾಲಿ ಟೆರೇಸ್ ಬಾಡಿಗೆಗೆ ಇದೆ. ಹದಡಿ ರೋಡ್, ಮೋರ್ ಹಿಂಭಾಗ
99860 86588

**ಬೇಕಾಗಿದ್ದಾರೆ**
ಗ್ಲಾಸ್ ಅಂಗಡಿಯಲ್ಲಿ ಕೆಲಸಕ್ಕೆ ಬೇಕಾಗಿದ್ದಾರೆ. ಹೊಸಬರಿಗೂ ಆದ್ಯತೆ.
95354 42711

**ಶಿಕ್ಷಕಿಯರು ಬೇಕಾಗಿದ್ದಾರೆ**
D.Ed.-02, BA, B.Ed. (Eng) -02, B.Sc. B.Ed.-3 M.Sc./M.Com/MBA-02
LITTLE CHAMPS GURUKULAM
Near HKR Circle, College Road, Nittuvalli, Davangere.
9060906039, 9844332559

**ಬೇಕಾಗಿದ್ದಾರೆ**
ಡಿಗ್ರಿ ಆದ ಪುರುಷ ಅಭ್ಯರ್ಥಿಗಳು ಕೆಲಸ ಮಾಡಲು ಬೇಕಾಗಿದ್ದಾರೆ.
ಹರ್ಷ ಸಿವಿಲ್ ಇಂಜಿನಿಯರ್ಸ್
ದಾವಣಗೆರೆ
79752 35107

**SHIKSHIT EDUCATION TRUST (R)**
Galaxy High Primary School
Wanted Teacher
Kannda, Hindi, English
B.Ed, D.Ed
Davaraj Urs Badavane 'C' Block opp Beeralingeshwar Kalyana Mantapa.
80732 26541, 90362 12686

**ಬೇಕಾಗಿದ್ದಾರೆ**
ಕ್ಲಿನಿಕ್ ನಲ್ಲಿ ಕೆಲಸ ನಿರ್ವಹಿಸಲು ಮಹಿಳಾ ಸಿಬ್ಬಂದಿ ಬೇಕಾಗಿದ್ದಾರೆ.
ವಿಳಾಸ:
ಡಾ. ಎನ್.ಹೆಚ್.ಕೃಷ್ಣ,
ಜೈನ್ ಲ್ಯಾಬ್ ಕೆಳಗೆ, ಮೋತಿ ವೀರಪ್ಪ ಕಾಲೇಜು ಹಿಂಭಾಗ, ಪಿ.ಜೆ.ಬಡಾವಣೆ, ದಾವಣಗೆರೆ

**ರೂಂ ಬಾಡಿಗೆಗೆ ಇದೆ**
ಸೋಮೇಶ್ವರ ಸ್ಕೂಲ್ ಹತ್ತಿರ, ನಿಟ್ಟುವಳ್ಳಿ ರೋಡ್ 2ನೇ ಮೇನ್, 2ನೇ ಕ್ರಾಸ್‌ನಲ್ಲಿ ಸುಸಜ್ಜಿತವಾದ ರೂಂ ಬಾಡಿಗೆಗೆ ದೊರೆಯುತ್ತದೆ.
99860 16490
93808 69239

**WANTED**
Field work Male -15 (SSLC, PUC Qulification) Receptionist -5, Accountant - 1, Tractor Sahowroom sales Officer Male -20 (Any Degree Qualification)
Contact No
74114 84844, 99010 78692

**ಜಮೀನು ಮಾರಾಟಕ್ಕಿದೆ**
ಮಿಟ್ಲಕಟ್ಟೆ ಗ್ರಾಮದ ರಿ.ಸ.ನಂ.7/16 ರಲ್ಲಿ 19 ಗುಂಟೆ ಜಮೀನು ಸಾಯಿಬಾಬಾ ಮಂದಿರದ ಎದುರು ಶಾಮನೂರು-ದೇವರ ಬೆಳಕೆರೆ ಮುಖ್ಯ ರಸ್ತೆಗೆ ಹೊಂದಿಕೊಂಡಿದೆ.
ಮಧ್ಯವರ್ತಿಗಳಿಗೆ ಅವಕಾಶವಿಲ್ಲ
87220 14318
95352 69849

**ಮನೆ ಬಾಡಿಗೆಗೆ/ಲೀಸ್‌ಗೆ ಇದೆ**
ವಿದ್ಯಾನಗರ ವಿನಾಯಕ ಬಡಾವಣೆಯ ಮೊದಲನೆ ಮುಖ್ಯ ರಸ್ತೆ, 5ನೇ ಕ್ರಾಸ್, ಡೋರ್ ನಂ.1962/35ರಲ್ಲಿ 3 ಬೆಡ್‌ರೂಂ ಹೊಂದಿರುವ ಮನೆ ಮೊದಲನೇ ಫ್ಲೋರ್‌ನಲ್ಲಿ ಬಾಡಿಗೆಗಿದೆ ಸಂಪರ್ಕಿಸಿ
98444 44810
08192 260707

**ಮನೆ/ಆಫೀಸ್ ಶಿಫ್ಟಿಂಗ್**
ಮನೆ ಮತ್ತು ಆಫೀಸ್ ಶಿಫ್ಟಿಂಗ್ ಹಾಗೂ ವಾಟರ್ ಟ್ಯಾಂಕನ್ನು ಮಿಷನ್‌ನಲ್ಲಿ ಕ್ಲೀನ್ ಮಾಡಲಾಗುವುದು.
99863 61250
91132 85992

**ಬೇಕಾಗಿದ್ದಾರೆ**
SSLC/PUC ಆದ ಮಹಿಳಾ ಅಭ್ಯರ್ಥಿಗಳು, ಬಿಲ್ ಮಾಡಲು & ಪ್ಯಾಕ್ ಮಾಡಲು ಸಗಟು ಔಷಧಿ ಅಂಗಡಿಯಲ್ಲಿ ಬೇಕಾಗಿದ್ದಾರೆ.
ಭೇಟಿಯಾಗುವ ಸಮಯ : ಸಂಜೆ 6ರ ನಂತರ.
ಶ್ರೀ ಗುರು ಎಂಟರ್‌ಪ್ರೈಸಸ್
ನಂ.579, 6ನೇ ಮುಖ್ಯರಸ್ತೆ, ಪಿ.ಜೆ. ಬಡಾವಣೆ, ದಾವಣಗೆರೆ-02

**ಸಾಲಗಳಿಗೆ ಸಂಪರ್ಕಿಸಿ**
(ಬಡ್ಡಿ ದರ ವಾರ್ಷಿಕ 7% ರಿಂದ ಪ್ರಾರಂಭ) ಮನೆ ಕಟ್ಟಲು, ಮನೆ ಖರೀದಿ, ಸೈಟ್ ಖರೀದಿ, ಕಟ್ಟಿರುವ ಮನೆಗೆ ಸಾಲ, ಬೇರೆ ಬ್ಯಾಂಕ್‌ನಲ್ಲಿ ತೆಗೆದುಕೊಂಡಿರುವ ಸಾಲ ವರ್ಗಾವಣೆ ಮತ್ತು ಅಧಿಕ ಸಾಲಕ್ಕಾಗಿ ಸಂಪರ್ಕಿಸಿ. (ಸಂಬಳ ಮತ್ತು ವ್ಯವಹಾರದಾರರಿಗೆ ಮಾತ್ರ)
73385 80345

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

**SHIKSHIT EDUCATION TRUST (R)**
Galaxy High Primary School
Wanted Teacher
Kannda, Hindi, English
B.Ed, D.Ed
Davaraj Urs Badavane 'C' Block opp Beeralingeshwar Kalyana Mantapa.
80732 26541, 90362 12686

**WALK IN IT**
Recruit (28th Feb/1st March)
Qualifcation : BE/MBA/Equivalent
Experience - 1 - 5 Years
Vedavit IT Solution, Davanagere. Contact us :
99644 52560
info@vedavititsolutions.com

**HOUSE FOR RENT**
2 BHK, 2nd Main, 6th Cross, MCC 'B' Block, Davanagere -577004
Contact
98440 84832

**ಹಾಲ್ ಬಾಡಿಗೆಗೆ ಇದೆ**
ಬ್ಯೂಟಿ ಪಾರ್ಲರ್/ಟ್ಯೂಷನ್ಸ್/ಆಫೀಸ್‌ಗಾಗಿ Ist Floorನಲ್ಲಿ ಬಾಡಿಗೆಗೆ ಇದೆ. ಮಾಮಾಸ್ ಜಾಯಿಂಟ್ ರೋಡ್, ಕಾರ್ನರ್ ಬಿಲ್ಡಿಂಗ್, ಎಂಸಿಸಿ ಬಿ ಬ್ಲಾಕ್, ದಾವಣಗೆರೆ.
82177 72482

**ಕೆಲಸಕ್ಕೆ ತಕ್ಷಣ ಬೇಕಾಗಿದ್ದಲ್ಲಿ!**
ಯಾವುದೇ ತರಹದ ಕೆಲಸಕ್ಕೆ ಯುವಕ/ಯುವತಿಯರು ಬೇಕಾಗಿದ್ದಲ್ಲಿ ನಮ್ಮನ್ನು ಸಂಪರ್ಕಿಸಿರಿ. ನಾವು ಯಾವುದೇ ತರಹದ ಫೀಜನ್ನು ತೆಗೆದುಕೊಳ್ಳುವುದಿಲ್ಲ, ಆಸಕ್ತರು ಸಂಪರ್ಕಿಸಿರಿ :
96320 77860

**SHRUTHI MOTORS**
P.B.Road, Davangere.
ಕಾರ್ ವಾಷಿಂಗ್ ಮಾಡಲು ಹುಡುಗರು ಬೇಕಾಗಿದ್ದಾರೆ. ಸಂಪರ್ಕಿಸಿ :
ವಿಜಯಬಾಬು-98804 01284
ವಸಂತಕುಮಾರ-96633 77659

**ಮನೆ ಬಾಡಿಗೆಗೆ ಇದೆ**
2 BHK ಕಾರ್ ಪಾರ್ಕಿಂಗ್ ಇದೆ ಶಿವಕುಮಾರಸ್ವಾಮಿ ಬಡಾವಣೆ, 2ನೇ ಹಂತ, 6ನೇ ಮುಖ್ಯರಸ್ತೆ, ದಾವಣಗೆರೆ. Contact No
99018 27501
81477 10697

**ಬೇಕಾಗಿದ್ದಾರೆ**
ಪಿ.ಆರ್.ಓ–10: (M/F)
ರೂ.6,000 ರಿಂದ 10,000 ಸಾವಿರ
ವಿದ್ಯಾರ್ಹತೆ ಪಿಯುಸಿ/ಪದವಿ
ಟೆಲಿಕಾಲರ್–10: (M/F)
ರೂ.6,000 ರಿಂದ 10,000 ಸಾವಿರ
ವಿದ್ಯಾರ್ಹತೆ ಪಿಯುಸಿ/ಪದವಿ
ಸೆಕ್ಯೂರಿಟಿ ಗಾರ್ಡ್–10: (M/F)
ರೂ.6,000 ರಿಂದ 10,000 ಸಾವಿರ
ವಿದ್ಯಾರ್ಹತೆ ಎಸ್.ಎಸ್.ಎಲ್.ಸಿ.
Principal, GMHPUC
GMIT Campus, DVG
ceo.drvr@gmhpuc.ac.in
91411-58731
99722-11111

**House To-Let**
2BHK 'Santrupthi' # 1640/66-67, Saraswati Badavane, Davanagere. Veg only
94484 46708

**ಮದ್ಯವ್ಯಸನಿಗೆ ಅರಿವಿಲ್ಲದಂತೆ ಮದ್ಯ ಸೇವನೆ ಬಿಡಿಸಿರಿ**
ಪ್ರತಿ ತಿಂಗಳು 7ಮತ್ತು 21ನೇ ತಾರೀಖು ಜನತಾ ಡೀಲಕ್ಸ್ ಲಾಡ್ಜ್, ಕೆ.ಎಸ್.ಆರ್.ಟಿ.ಸಿ. ಹೊಸ ಬಸ್ ಸ್ಟ್ಯಾಂಡ್ ಎದುರು, ದಾವಣಗೆರೆ.
4 ಮತ್ತು 18ರಂದು ಕಾವೇರಿ ಲಾಡ್ಜ್, ಪೂನಾ - ಬೆಂಗಳೂರು ರೋಡ್, ಹಾವೇರಿ.
ಅಸ್ತಮಾ, ಕೀಲು ನೋವು
ಡಾ|| ಎಸ್.ಎಂ. ಸೇಠಿ. ಫೋನ್ : 96322 95561
ಸಮಯ: ಬೆಳಿಗ್ಗೆ 10ರಿಂದ ಮಧ್ಯಾಹ್ನ 2 ರವರೆಗೆ.

**ಭೂಮಿಕಾ ಮ್ಯಾಟ್ರಿಮೊನಿ**
ಲಿಂಗಾಯಿತ ವಧು-ವರರ ಕೇಂದ್ರ,
H.O : Near coffee day nutana collage road, Vidyanagara 2nd main, Davangere
77603 16576
90080 55813

**STATE BANK OF INDIA**
ಜನ್‌ಧನ್ ಖಾತೆ ಮಾಡಲಾಗುತ್ತದೆ
('0' Account open) with ATM
Old B.S. ಚನ್ನಬಸಪ್ಪ & ಸನ್ಸ್ ಹಿಂಭಾಗ # 264/1 ಮಹಾರಾಜ ಪೇಟೆ, ವಿಠ್ಠಲ ಮಂದಿರ ಹತ್ತಿರ, ದಾವಣಗೆರೆ.
99806 10005

**ಮನೆ ಮಾರಾಟಕ್ಕಿದೆ**
20x30 ಅಳತೆಯ ಪೂರ್ವ ದಿಕ್ಕಿನ ಗ್ರೌಂಡ್ ಮತ್ತು ಮೊದಲನೇ ಮಹಡಿಯ ಫೈನಲ್ ಅಪ್ರೂವಲ್ ಆಗಿರುವ ಖಾದಿ ಕೇಂದ್ರ ಹಿಂಭಾಗ, ಭಗೀರಥ ಸರ್ಕಲ್ ಹತ್ತಿರ, ಜಯನಗರ, ದಾವಣಗೆರೆಯಲ್ಲಿ ಮನೆ ಮಾರಾಟಕ್ಕಿದೆ.
87470 61217

**SEAT COVERS**
Sonal All types of two wheeler seat covers oppsit Big Bazar, P.B. Road, Davanagere.
92421 45611

**ಗ್ಲೋಬಲ್ ಹೆಲ್ಪ್‌ಲೈನ್ ನಿರುದ್ಯೋಗ ನಿವಾರಣಾ ಸಂಘ (ರಿ.)**
ಯುವಕ/ಯುವತಿಯರೇ, ಕೆಲಸವಿಲ್ಲ ಎಂದು ಕೊರಗಬೇಡಿ... ನಿಮ್ಮ ವಿದ್ಯಾರ್ಹತೆಗೆ ತಕ್ಕ ಕೆಲಸಗಳನ್ನು ನಮ್ಮ ಸಂಘದ ವತಿಯಿಂದ ಕೊಡಿಸುತ್ತೇವೆ.
ಉದ್ಯೋಗ ಮಾಹಿತಿ ಕೇಂದ್ರ
81470 12999, 89512 72999

## ಹಳೆಬೆಳವನೂರಿನಲ್ಲಿ ವಿವಿಧ ಕಾಮಗಾರಿಗಳಿಗೆ ಭೂಮಿ ಪೂಜೆ



ದಾವಣಗೆರೆ,ಫೆ.28- ಸಮೀಪದ ಹಳೆಬೆಳವನೂರು ಗ್ರಾಮದಲ್ಲಿ ಶಾಸಕ ಡಾ. ಶಾಮನೂರು ಶಿವಶಂಕರಪ್ಪ ಅವರು ವಿವಿಧ ಕಾಮಗಾರಿಗಳಿಗೆ ನಿನ್ನೆ ಭೂಮಿ ಪೂಜೆ ನೆರವೇರಿಸಿದರು. 30 ಲಕ್ಷ ರೂ.ಗಳ ವೆಚ್ಚದ ಅಕ್ಕಮಹಾದೇವಿ ಸಮುದಾಯ ಭವನಕ್ಕೆ ಗುದ್ದಲಿ ಪೂಜೆ ನೆರವೇರಿಸಿದ ಎಸ್ಸೆಸ್, 137.4 ಲಕ್ಷ ರೂ.ಗಳ ವೆಚ್ಚದಲ್ಲಿ ಹಳೆಬೆಳವನೂರು - ಪಾಮೇನಹಳ್ಳಿ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಗುದ್ದಲಿ ಪೂಜೆ ಮಾಡಿದರು.

ಜಿ.ಪಂ. ಹದಡಿ ಕ್ಷೇತ್ರದ ಸದಸ್ಯ ನಿಂಗಪ್ಪ, ಬೆಳವನೂರು ಗ್ರಾ.ಪಂ. ಅಧ್ಯಕ್ಷ ಜೆ.ಹೆಚ್. ಮಹಾಂತೇಶ್, ಉಪಾಧ್ಯಕ್ಷೆ ಶ್ರೀಮತಿ ಶೃತಿ ನಾಗರಾಜ್, ಗ್ರಾ.ಪಂ. ಸದಸ್ಯ ಎಂ.ಪಿ. ನವೀನ್ ಕುಮಾರ್ ಮತ್ತಿತರರು ಉಪಸ್ಥಿತರಿದ್ದರು.

# ವಚನಗಳು ಬದುಕಿಗೆ ಹಿಡಿದ ಕನ್ನಡಿ



ಸಾಣೇಹಳ್ಳಿ, ಫೆ.28- ಪ್ರತಿಯೊಂದು ವಚನಗಳೂ ನಮ್ಮ ಬದುಕಿಗೆ ಹಿಡಿದ ಕನ್ನಡಿ ಇದ್ದಂತೆ. ಬಸವಣ್ಣನವರು ಇಂದಿಗೂ ನಮಗೆ ಆದರ್ಶ ಎಂದು ಸಾಣೇಹಳ್ಳಿ ಡಾ. ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ ಹೇಳಿದರು.

ಸಾಣೇಹಳ್ಳಿ ಶ್ರೀ ಶಿವಕುಮಾರ ಕಲಾಸಂಘ ಮತ್ತು ಕರ್ನಾಟಕ ಯಕ್ಷಗಾನ ಅಕಾ ಡೆಮಿ ಬೆಂಗಳೂರು ಇವರ ಸಂಯುಕ್ತಾಶ್ರಯದಲ್ಲಿ ಏರ್ಪಡಿಸಿದ್ದ 'ಶರಣ ಸಾಹಿತ್ಯ ಮತ್ತು ಯಕ್ಷಗಾನ' ಕುರಿತ ವಿಚಾರ ಸಂಕಿರಣ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿ ಶ್ರೀಗಳು ಮಾತನಾಡಿದರು.

ಬಸವಣ್ಣನವರ ಬಹುತೇಕ ವಚನಗಳು ನಮ್ಮನ್ನೇ ಕುರಿತಂತೆ ಇವೆ. ಇನ್ನೊಬ್ಬರನ್ನು ಅವಲಂಭಿಸದೇ ನಮ್ಮನ್ನು ನಾವೇ ಅವಲಂಬಿಸಬೇಕು. ನಾವು ಇನ್ನೊಬ್ಬರಿಗೆ ಆದರ್ಶವಾಗಬೇಕೇ ಹೊರತು, ಇನ್ನೊಬ್ಬರು ನಮಗೆ ಆದರ್ಶವಾಗಬಾರದು ಎಂದು ನುಡಿದರು.

ಹಿಂದೆ ಯಕ್ಷಗಾನ ಕೇವಲ ಒಂದು ವರ್ಗಕ್ಕೆ ಮಾತ್ರ ಸೀಮಿತವಾಗಿತ್ತು. ಆದರೆ ಇತ್ತೀಚೆಗೆ ವಿಸ್ತಾರಗೊಳ್ಳುತ್ತಿರುವುದು ಆಶಾದಾಯಕ ಬೆಳವಣಿಗೆ ಎಂದರು.

ಮಕ್ಕಳ ಮನಸ್ಸು ಖಾಲಿ ಚೀಲವಿದ್ದಂತೆ ನಾವು ಏನನ್ನು ತುಂಬಬೇಕೆಂಬ ವಿವೇಚನೆ ಇರಬೇಕು. ಮೌಲ್ಯಯುತವಾದದ್ದನ್ನು ತುಂಬುವ ಪ್ರಯತ್ನವನ್ನು ಹಿರಿಯರೆಲ್ಲರೂ ಮಾಡಬೇಕೆಂದು ಕರೆ ನೀಡಿದರು.

'ಶೂನ್ಯ ಸಂಪಾದನೆ ಮತ್ತು ತಾಳಮದ್ದಲೆ' ಕುರಿತಂತೆ ಚಿಕ್ಕಮಗಳೂರು ಬಸವ ತತ್ವ ಪೀಠದ ಡಾ. ಬಸವ ಮರುಳಸಿದ್ಧ ಸ್ವಾಮಿಗಳು ಮಾತನಾಡಿ, ಯಕ್ಷಗಾನ ಅಬ್ಬರದಿಂದಲೇ ಪ್ರಾರಂಭವಾಗುವ ಕಲೆ. ಈ ಕಾರಣಕ್ಕಾಗಿ ಕಾಳಗದ ದೃಶ್ಯಗಳು ಹೆಚ್ಚಿರುತ್ತವೆ. ಯಕ್ಷಗಾನಕ್ಕೆ ಶೂನ್ಯ ಸಂಪಾದನೆಯ ಕಥಾನಕವನ್ನು ಪೂರ್ಣ ಪ್ರಮಾಣದಲ್ಲಿ ಒಗ್ಗಿಸಲು ಸಾಧ್ಯವಿಲ್ಲ ಎಂದರು.

ಇಲ್ಲಿನ ಅನೇಕ ಮಾತುಗಳು ತಾಳಮದ್ದಲೇಗೆ ಒಳಪಡುವುದಿಲ್ಲ. ಕಥೆಗಳನ್ನು ಪ್ರಸಂಗ ರೂಪದಲ್ಲಿ ಪ್ರಸ್ತುತಪಡಿಸುತ್ತಾರೆ. ಶೂನ್ಯ ಸಂಪಾದನೆ ರಚನೆಯಾಗಿದ್ದೇ ತಾಳ ಮದ್ದಲೆಗೆ ಹೊಂದುವಂತಹ ಹಿನ್ನೆಲೆಯಲ್ಲಿ ಎಂದು ಹೇಳಿದರು. 'ಬಸವೇಶ್ವರ ಚರಿತೆ ಮತ್ತು ಅಕ್ಕಮಹಾದೇವಿ ಚರಿತೆ' ಕುರಿತು ಡಾ. ಕವಿತಾ ಸಾಗರ ಮಾತನಾಡಿದರು.

'ಮೂಡಲಪಾಯದಲ್ಲಿ ಶರಣ ಸಾಹಿತ್ಯದ ಪ್ರಸಂಗಗಳು' ಕುರಿತು ಡಾ. ಶ್ರೀಶೈಲ ಹುದ್ದಾರ, 'ಮಾಯಾ ಕೋಲಾಹಲ ಪ್ರದರ್ಶನಗಳು' ಕುರಿತು ಶಶಿಕಲಾ ಜೋಶಿ, 'ಬಸವೇಶ್ವರ ಚರಿತೆಯ ಯಕ್ಷಗಾನ ತಿರುಗಾಟ' ಕುರಿತು ವಿದ್ವಾನ್ ದತ್ತಮೂರ್ತಿ ಭಟ್ ಮಾತನಾಡಿದರು.

ಕರ್ನಾಟಕ ಯಕ್ಷಗಾನ ಅಕಾಡೆಮಿಯ ಪ್ರೊ. ಎಂ.ಎ. ಹೆಗಡೆ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಹೊಳಲ್ಕೆರೆ ಶಾಸಕ ಎಂ. ಚಂದ್ರಪ್ಪ ಸೇರಿದಂತೆ ಮತ್ತಿತರರಿದ್ದರು.

## ವೀರಶೈವ ಲಿಂಗಾಯತ ಜಂಗಮರಿಗೆ ಎಸ್ಸಿ ಜಾತಿ ಪ್ರಮಾಣ ಪತ್ರ ನೀಡಬಾರದು



ಹರಿಹರ, ಫೆ.28- ಇತ್ತೀಚೆಗೆ ಕೆಲವು ಮಠಾಧೀಶರ ನಿಯೋಗ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪನವರನ್ನು ಭೇಟಿ ಮಾಡಿ, ವೀರಶೈವ ಜಂಗಮ ಸಮುದಾಯಕ್ಕೆ ಪರಿಶಿಷ್ಟ ಜಾತಿ ಪ್ರಮಾಣ ಪತ್ರ ನೀಡಲು ಅಧಿಕಾರಿಗಳಿಗೆ ಸೂಚಿಸಬೇಕೆಂದು ಮನವಿ ಮಾಡಿದ್ದು, ಮುಖ್ಯಮಂತ್ರಿಗಳು ವೀರಶೈವ ಲಿಂಗಾಯತ ಜಂಗಮರ ಬೇಡಿಕೆಗೆ ಮನ್ನಣೆ ನೀಡಬಾರದು ಎಂದು ದಲಿತ ಸಂಘರ್ಷ ಸಮಿತಿ (ಪ್ರೊ. ಬಿ.ಕೃಷ್ಣಪ್ಪ ಬಣ) ತಾಲ್ಲೂಕು ಸಂಚಾಲಕ ಪಿ.ಜೆ.ಮಹಾಂತೇಶ್ ಆಗ್ರಹಿಸಿದ್ದಾರೆ.

ಶತಮಾನಗಳಿಂದ ಶೋಷಣೆಗೀಡಾದ ವಿವಿಧ ಶೋಷಿತ ಸಮಾಜಗಳ ಜನರ ಅಭಿವೃದ್ಧಿಗಾಗಿ ಸಂವಿಧಾನ ಪರಿಶಿಷ್ಟ ಜಾತಿ, ಪಂಗಡದಡಿ ಮೀಸಲಾತಿ ನೀಡಲು ಅವಕಾಶ ಕಲ್ಪಿಸಿದೆ. ಅದರಂತೆ ಅಲೆಮಾರಿಗಳಾದ ಬೇಡ ಜಂಗಮ, ಬುಡ್ಗ ಜಾತಿಗಳು ಪರಿಶಿಷ್ಟ ಜಾತಿ ಎಂದು ಪರಿಗಣಿಸಲಾಗಿದೆ. ಆದರೆ, ಇತ್ತೀಚೆಗೆ ನಮ್ಮ ರಾಜ್ಯದಲ್ಲಿ ಮೇಲ್ವರ್ಗಕ್ಕೆ ಸೇರಿದ ಕೆಲವು ವೀರಶೈವ ಲಿಂಗಾಯತ ಜಂಗಮರೂ ಸಹ ತಾವು 'ಬೇಡ ಜಂಗಮ'ರೆಂದು ಸುಳ್ಳು ಹೇಳಿಕೊಂಡು ಅನುಸೂಚಿತ ಜಾತಿ ಪ್ರಮಾಣ ಪತ್ರ ಪಡೆದು, ನೈಜ ಬೇಡ ಜಂಗಮರಿಗೆ ಹಾಗೂ ಅನುಸೂಚಿತ ಜಾತಿ ಜನರಿಗೆ ಅನ್ಯಾಯ ಮಾಡುತ್ತಿದ್ದಾರೆ ಎಂದು ಆರೋಪಿಸಿದ್ದಾರೆ.

ಹೀಗೆ ಲಿಂಗಾಯತ ಉಪಜಾತಿಯಾದ ಜಂಗಮ ಜನಾಂಗಕ್ಕೂ ಮತ್ತು ಬೇಡ ಅಥವಾ ಬುಡ್ಗ ಜಂಗಮ ಜನಾಂಗಕ್ಕೂ ಯಾವುದೇ ಸಂಬಂಧವಿಲ್ಲವೆಂದು ಅಂತ್ರೋಪಾಲಾಜಿಕಲ್ ಸರ್ವೇ ಆಫ್ ಇಂಡಿಯಾ (ಮಾನವಶಾಸ್ತ್ರ ಸರ್ವೇಕ್ಷಣಾ ಸಂಸ್ಥೆ) ಸ್ಪಷ್ಟಪಡಿಸಿದೆ. ಸುಳ್ಳು ಜಾತಿ ಪ್ರಮಾಣ ನೀಡುವ ಅಧಿಕಾರಿಯ ವಿರುದ್ಧ ಕ್ರಿಮಿನಲ್ ದಾವೆ ಹೂಡಲು ಸುಪ್ರೀಂ ಕೋರ್ಟ್ ಕೂಡ ಆದೇಶ ನೀಡಿದೆ.


ಸರ್ಕಾರ ಯಾವುದೇ ಕಾರಣಕ್ಕೂ ಇಂತಹ ಒತ್ತಡಗಳಿಗೆ ಮಣೆ ಹಾಕಬಾರದು. ಒತ್ತಡಕ್ಕೆ ಮಣಿದರೆ ಸರ್ಕಾರದ ವಿರುದ್ಧ ಉಗ್ರ ಹೋರಾಟ ಹಮ್ಮಿಕೊಳ್ಳುವುದು ಅನಿವಾರ್ಯವಾಗುತ್ತದೆ ಎಂದು ಎಚ್ಚರಿಸಿದ್ದಾರೆ.

# ಎಫ್‌ಡಿಎ : ಮಧ್ಯಾಹ್ನದ ಪರೀಕ್ಷೆಗೆ 47 ಅಭ್ಯರ್ಥಿಗಳು ಗೈರು

ದಾವಣಗೆರೆ, ಫೆ.28- ಭವಿಷ್ಯದಲ್ಲಿ ಸರ್ಕಾರಿ ಉದ್ಯೋಗದ ಕನಸು ಹೊತ್ತು ಪರೀಕ್ಷಾರ್ಥಿಗಳು ಇಂದು ಕೆಪಿಎಸ್‌ಸಿ ನಡೆಸಿದ ಪ್ರಥಮ ದರ್ಜೆ ಸಹಾಯಕರ ಹುದ್ದೆಗಳ ಸ್ಪರ್ಧಾತ್ಮಕ ಪರೀಕ್ಷೆಯನ್ನು ಎದುರಿಸಿದರು.

ಪ್ರಶ್ನೆ ಪತ್ರಿಕೆ ಸೋರಿಕೆ ಹಿನ್ನೆಲೆಯಲ್ಲಿ ಕಳೆದು ತಿಂಗಳು ನಡೆಯಬೇಕಿದ್ದ ಪರೀಕ್ಷೆಯನ್ನು ಇಂದಿಗೆ ಮುಂದೂಡಲಾಗಿತ್ತು. ಮತ್ತೊಮ್ಮೆ ಅವಘಡ ಸಂಭವಿಸಬಾರದು ಎಂಬ ಉದ್ದೇಶದಿಂದ ಅಗತ್ಯ ಮುನ್ನೆಚ್ಚರಿಕಾ ಕ್ರಮಗಳೊಂದಿಗೆ ಬಿಗಿ ಬಂದೋಬಸ್ತ್ ನಡುವೆ ಯಾವುದೇ ಆತಂಕವಿಲ್ಲದೇ ಬೆಳಿಗ್ಗೆ ಮತ್ತು ಮಧ್ಯಾಹ್ನ ಎರಡು ಪ್ರಶ್ನೆ ಪತ್ರಿಕೆಗಳಿಗೆ ಅಭ್ಯರ್ಥಿಗಳು ಪರೀಕ್ಷೆ ಬರೆದರು.

ನಗರದ 33 ಕೇಂದ್ರಗಳಲ್ಲಿ ಈ ಸ್ಪರ್ಧಾತ್ಮಕ ಪರೀಕ್ಷೆ ಸುಗಮವಾಗಿ ನಡೆದಿದೆ. 11688 ನೋಂದಾಯಿತ ಪರೀಕ್ಷಾರ್ಥಿಗಳ ಪೈಕಿ ಬೆಳಗ್ಗೆ ನಡೆದ ಸಾಮಾನ್ಯ ಜ್ಞಾನ ಪರೀಕ್ಷೆಗೆ 7812 ಪರೀಕ್ಷಾರ್ಥಿಗಳು ಪರೀಕ್ಷೆ ಬರೆದಿದ್ದು, 3876 ಮಂದಿ ಗೈರಾಗಿದ್ದಾರೆ. ಮಧ್ಯಾಹ್ನ ನಡೆದ ಸಾಮಾನ್ಯ ಕನ್ನಡ ಅಥವಾ ಇಂಗ್ಲಿಷ್ ಪರೀಕ್ಷೆಗೆ 7765 ಮಂದಿ ಪರೀಕ್ಷೆ ಬರೆದಿದ್ದು, 3923 ಮಂದಿ ಗೈರಾಗಿದ್ದಾರೆ. ಬೆಳಗ್ಗೆ ಪರೀಕ್ಷೆ ಎದುರಿಸಿದ್ದ 47 ಮಂದಿ ಮಧ್ಯಾಹ್ನದ ಪರೀಕ್ಷೆಯಿಂದ ದೂರ ಸರಿದಿದ್ದಾರೆ.







**ಹಸುಗೂಸಿನೊಂದಿಗೆ ಬಂದು ಪರೀಕ್ಷೆ ಬರೆದ ಮಹಿಳಾ ಪರೀಕ್ಷಾರ್ಥಿ:** ನಗರದ ದೃಶ್ಯಕಲಾ ಮಹಾವಿದ್ಯಾಲಯದ ಬಳಿ ಇರುವ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಪರೀಕ್ಷಾ ಕೇಂದ್ರದಲ್ಲಿ ತನ್ನ 3 ತಿಂಗಳ ಹಸುಗೂಸಿನೊಂದಿಗೆ ಬಂದು ಬಾಣಂತಿ ಮಹಿಳಾ ಪರೀಕ್ಷಾರ್ಥಿ ಎನ್. ಶ್ವೇತಾ ಪರೀಕ್ಷೆ ಬರೆದಿದ್ದು ವಿಶೇಷವಾಗಿತ್ತು.

ಪರೀಕ್ಷಾರ್ಥಿ ಶ್ವೇತಾ ದಾವಣಗೆರೆ ತಾಲ್ಲೂಕು ತೋಳಹುಣಸೆಯ ಯಲ್ಲಮ್ಮ ನಗರದವರಾಗಿದ್ದು, ತನ್ನ ಮಗು ಸಹಿತ ಪರೀಕ್ಷಾ ಕೇಂದ್ರಕ್ಕೆ ಬಂದು ಸಂಬಂಧಿ ಮಹಿಳೆಯೋರ್ವರ ಕೈಗೆ ಮಗು ನೀಡಿ ಪರೀಕ್ಷೆ ಬರೆದಿದ್ದಾರೆ. ಪರೀಕ್ಷಾ ಕೇಂದ್ರದ ಹೊರಗೆ ಕುಳಿತಿದ್ದ ಸಂಬಂಧಿಕ ಮಹಿಳೆಯ ಮಡಿಲಲ್ಲಿ ಮಗು ನಿದ್ರಿಸುತ್ತಿದ್ದರೆ ಇತ್ತ ತಾಯಿ ಶ್ವೇತಾ ಪರೀಕ್ಷೆ ಬರೆದರು.

**ಡಿಸಿ-ಸಿಇಓ ಭೇಟಿ:** ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ ಮತ್ತು ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಡಾ. ವಿಜಯ ಮಹಾಂತೇಶ್ ದಾನಮ್ಮನವರ್ ನಗರದ ಮೋತಿ ವೀರಪ್ಪ ಸರ್ಕಾರಿ ಪಿ.ಯು. ಕಾಲೇಜು ಮತ್ತು ಸಿದ್ದಗಂಗಾ ಶಾಲೆ ಸೇರಿದಂತೆ ವಿವಿಧ ಪರೀಕ್ಷಾ ಕೇಂದ್ರಗಳಿಗೆ ಭೇಟಿ ನೀಡಿ ಪರಿಶೀಲಿಸಿದರು.

## ಮಾ. 2 ರಂದು ಕಾರ್ಯಾಗಾರ

ದಾವಣಗೆರೆ, ಫೆ.28 - ನಾಡಿದ್ದು ದಿನಾಂಕ 2 ರಂದು ಬೆಳಿಗ್ಗೆ 10.30ಕ್ಕೆ ನಗರದ ಪೂಜಾ ಇಂಟರ್ ನ್ಯಾಷನಲ್ ಹೋಟೆಲ್‌ನಲ್ಲಿ ಭಾರತೀಯ ಗುಣಮಟ್ಟ ಮಾನದಂಡ ಸಂಸ್ಥೆ (ಬಿಐಎಎಸ್), ಕೇಂದ್ರ ಸರ್ಕಾರದ ಕಚೇರಿ ಮತ್ತು ಜಿಲ್ಲಾ ಕೈಗಾರಿಕಾ ಕೇಂದ್ರ, ದಾವಣಗೆರೆ ಇವರ ಸಂಯೋಜನೆಯೊಂದಿಗೆ ಕಾರ್ಯಾಗಾರ ಹಮ್ಮಿಕೊಳ್ಳಲಾಗಿದೆ. ಸಂಸದ ಜಿ.ಎಂ.ಸಿದ್ದೇಶ್ವರ ಉದ್ಘಾಟಿಸಲಿದ್ದಾರೆ. ಅತಿಥಿಗಳಾಗಿ ಶಾಸಕರುಗಳು ಭಾಗವಹಿಸಲಿದ್ದಾರೆ ಎಂದು ಕೈಗಾರಿಕಾ ಇಲಾಖೆಯ ಜಯಪ್ರಕಾಶ್ ನಾರಾಯಣ್ ತಿಳಿಸಿದ್ದಾರೆ.

## ಭಾರತದ ವಿದ್ಯಾರ್ಥಿಗಳಿಂದ 18 ಕ್ಷುದ್ರಗ್ರಹ ಪತ್ತೆ

ಬೆಂಗಳೂರು, ಫೆ. 28 – ಭಾರತದ ವಿದ್ಯಾರ್ಥಿಗಳು 18 ಹೊಸ ಕ್ಷುದ್ರ ಗ್ರಹಗಳನ್ನು ಕಂಡು ಹಿಡಿದಿರುವುದನ್ನು ಇಂಟರ್‌ನ್ಯಾಷಲ್ ಆಸ್ಟ್ರಾನಮಿಕಲ್ ಯೂನಿಯನ್ (ಐ.ಎ.ಯು) ಖಚಿತ ಪಡಿಸಿದೆ. ಐ.ಎ.ಯು. ಬಾಹ್ಯಾಕಾಶ ಕಾಯಗಳಿಗೆ ಅಧಿಕೃತವಾಗಿ ಹೆಸರುಗಳನ್ನು ಕೊಡುತ್ತದೆ. ಕಳೆದ ಎರಡು ವರ್ಷಗಳಲ್ಲಿ ದೇಶದ 150 ವಿದ್ಯಾರ್ಥಿಗಳು ಜೊತೆಯಾಗಿ ಕ್ಷುದ್ರಗ್ರಹಗಳನ್ನು ಕಂಡು ಹಿಡಿದಿದ್ದಾರೆ.

ಸ್ಟೆಮ್ ಹಾಗೂ ಸ್ಪೇಸ್ ಸಂಘಟನೆ ದಿ ಇಂಟರ್‌ನ್ಯಾಷನಲ್ ಅಸ್ಟ್ರಾಯ್ಡ್ ಡಿಸ್ಕವರಿ ಪ್ರಾಜೆಕ್ಟ್ ರೂಪಿಸಿದ್ದು. ಅದರ ಅನ್ವಯ ಕ್ಷುದ್ರಗ್ರಹಗಳನ್ನು ಶೋಧಿಸಲಾಗಿದೆ ಎಂದು ಸಂಘಟನೆಯ ಸಹ ಸ್ಥಾಪಕಿ ಮಿಲಾ ಮಿತ್ರ ತಿಳಿಸಿದ್ದಾರೆ.






# ನಾಳೆ ಅಂಗನವಾಡಿ ಕಾರ್ಯಕರ್ತೆಯರ, ಸಹಾಯಕರ ಬೆಂಗಳೂರು ಚಲೋ

ದಾವಣಗೆರೆ, ಫೆ.28- ಪಿಂಚಣಿ, ಅಂಗನವಾಡಿ ಕೇಂದ್ರಗಳ ಮೇಲ್ದರ್ಜೆ ಸೇರಿದಂತೆ ವಿವಿಧ ಬೇಡಿಕೆಗಳ ಈಡೇರಿಕೆಗೆ ಒತ್ತಾಯಿಸಿ, ರಾಜ್ಯ ಅಂಗನವಾಡಿ ಕಾರ್ಯಕರ್ತೆಯರು ಹಾಗೂ ಸಹಾಯಕಿಯರ ಫೆಡರೇಷನ್ ನಾಡಿದ್ದು ದಿನಾಂಕ 2 ರಂದು ಬೆಂಗಳೂರು ಚಲೋ ಕಾರ್ಯಕ್ರಮ ಹಮ್ಮಿಕೊಂಡಿದೆ ಎಂದು ಫೆಡರೇಷನ್ ರಾಜ್ಯಾಧ್ಯಕ್ಷ ಹೆಚ್.ಕೆ. ರಾಮಚಂದ್ರಪ್ಪ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಅಂದು ಬೆಳಿಗ್ಗೆ 11 ಕ್ಕೆ ಬೆಂಗಳೂರಿನ ಸಂಗೊಳ್ಳಿ ರಾಯಣ್ಣ ರೈಲ್ವೆ ನಿಲ್ದಾಣದಿಂದ ಬೃಹತ್ ಪ್ರತಿಭಟನಾ ಮೆರವಣಿಗೆ ಹೊರಟು ಫ್ರೀಡಮ್ ಪಾರ್ಕ್‌ನಲ್ಲಿ ಬಹಿರಂಗ ಸಭೆ ನಡೆಸಿದ ನಂತರ ಸಂಬಂಧಿಸಿದ ಇಲಾಖೆ ಸಚಿವರು ಮತ್ತು ಅಧಿಕಾರಿಗಳಿಗೆ ಮನವಿ ಸಲ್ಲಿಸಲಾಗುವುದು ಎಂದರು.

ಸಮಗ್ರ ಶಿಶು ಅಭಿವೃದ್ಧಿ ಯೋಜನೆಯಡಿ ನಾಲ್ಕು ದಶಕಗಳಿಂದ ಕನಿಷ್ಟ ವೇತನವೂ ಇಲ್ಲದೆ ಕೆಲಸ ಮಾಡುತ್ತಿರುವ ಅಂಗನವಾಡಿ ಕಾರ್ಯಕರ್ತೆಯರು ಹಾಗೂ ಸಹಾಯಕಿಯರಿಗೆ ಸೇವಾ ಹಿರಿತನದ ಆಧಾರದ ಮೇಲೆ ಗೌರವ ಧನ ನೀಡಬೇಕು. ಪಿಂಚಣಿ ಸೌಲಭ್ಯ ಕಲ್ಪಿಸಬೇಕೆಂದು ಆಗ್ರಹಿಸಿದರು. ಉಚಿತ ವೈದ್ಯಕೀಯ ಸೌಲಭ್ಯ, ಇಎಸ್‌ಐ, ಅಂಗನವಾಡಿ ಕೇಂದ್ರಗಳಲ್ಲಿಯೇ ಎಲ್‌ಕೆಜಿ, ಯುಕೆಜಿ ಆರಂಭಿಸಿ ಕಾರ್ಯಕರ್ತೆಯರಿಗೆ, ಸಹಾಯಕರಿಗೆ ತರಬೇತಿ ನೀಡಬೇಕೆಂದರು.

ಮಾ. 1 ರಂದು ಊಟದ ವ್ಯವಸ್ಥೆಯೊಂದಿಗೆ ಬೆಂಗಳೂರು ಚಲೋ ಹೋರಾಟದಲ್ಲಿ ಭಾಗವಹಿಸಲು ಕರೆ ನೀಡಿದರು.

ಆವರಗೆರೆ ಪಿ.ಬಿ. ಚಂದ್ರು, ಎಂ.ಬಿ. ಶಾರದಮ್ಮ, ಎಸ್.ಎಸ್. ಮಲ್ಲಮ್ಮ, ಸಿ.ಬಿ. ಕಾಳಮ್ಮ, ಎಂ. ಜಯಮ್ಮ, ವಿಜಯಕುಮಾರಿ, ರೇಣುಕಮ್ಮ, ಸರೋಜಮ್ಮ, ಸುರೇಶ್, ಸುಧಾ ಮತ್ತಿತರರು ಪತ್ರಿಕಾಗೋಷ್ಠಿಯಲ್ಲಿದ್ದರು.

## ಮಡಿವಾಳ ಮಾಚಿದೇವ ಸಂಘದಿಂದ ಇಂದು ಅಭಿನಂದನಾ ಸಮಾರಂಭ

ವಿನೋಬನಗರದ ಜಿಲ್ಲಾ ಮಡಿವಾಳ ಮಾಚಿದೇವ ಸಂಘದಿಂದ ಇಲ್ಲಿನ ಸಮುದಾಯ ಭವನದಲ್ಲಿ ಇಂದು ಬೆಳಿಗ್ಗೆ 11ಕ್ಕೆ ದೇವರಾಜ ಅರಸು ಹಿಂದುಳಿದ ಅಭಿವೃದ್ಧಿ ನಿಗಮದ ಅಧ್ಯಕ್ಷ ರಘು ಆರ್.ಕೌಟಿಲ್ಯ, ಮೇಯರ್ ಎಸ್.ಟಿ.ವೀರೇಶ್ ಹಾಗೂ ಜಯಪ್ರಕಾಶ್ ಅಂಬರ್‌ಕರ್ ಇವರಿಗೆ ಅಭಿನಂದನಾ ಸಮಾರಂಭ. ಜಿಲ್ಲಾಧ್ಯಕ್ಷ ಎಂ.ನಾಗೇಂದ್ರಪ್ಪ ಅಧ್ಯಕ್ಷತೆಯಲ್ಲಿ ನಡೆಯಲಿದೆ.










## ಬಾಲಕನಿಂದ ರಾಮಮಂದಿರಕ್ಕೆ ನಿಧಿ ಸಮರ್ಪಣೆ



ಹೊಳೆಹೊನ್ನೂರು, ಫೆ. 28 - ಅಯೋಧ್ಯೆ ಶ್ರೀ ರಾಮಮಂದಿರದ ನಿರ್ಮಾಣಕ್ಕೆ ನಡೆಯುತ್ತಿರುವ ನಿಧಿ ಸಮರ್ಪಣಾ ಅಭಿಯಾನಕ್ಕೆ 7ನೇ ತರಗತಿ ವಿದ್ಯಾರ್ಥಿ ಅಹೀಶ್ ತಾನು ಕೂಡಿಟ್ಟಿದ್ದ 830 ರೂ.ಗಳನ್ನು ಸಮರ್ಪಿಸಿದ್ದಾನೆ. ಅಭಿಯಾನ ಕಾರ್ಯಕರ್ತರು ತಮ್ಮ ಮನೆಗೆ ಬಂದು ಶ್ರೀ ರಾಮಮಂದಿರದ ಬಗ್ಗೆ ತನ್ನ ಪೋಷಕರಿಗೆ ವಿವರಿಸುತ್ತಿದ್ದ ಸಂದರ್ಭದಲ್ಲಿ ಅಹೀಶ್ ಈ ಹಣವನ್ನು ಅಭಿಯಾನಕ್ಕೆ ನೀಡುವ ನಿರ್ಧಾರವನ್ನು ಪ್ರಕಟಿಸಿದಾಗ ಪೋಷಕರು ಆಶ್ಚರ್ಯಚಕಿತರಾಗಿ ಪ್ರೋತ್ಸಾಹಿಸಿದರು.

ಅಹೀಶ್, ಶಿಕ್ಷಕಿ ಶ್ರೀಮತಿ ವೀಣಾ (ಮಾಧವಿ) ಮತ್ತು ಬೆಸ್ಕಾಂ ಗುತ್ತಿಗೆದಾರ ವಾಸುಕಿ ದಂಪತಿ ಪುತ್ರ.







## ಪ್ರಥಮ ವರ್ಷದ ಪುಣ್ಯಸ್ಮರಣೆ

ಜನನ : 17.7.1977



ಮರಣ : 01.03.2020


**ಶ್ರೀಮತಿ ವಿನೋದ ಎಸ್. ಶಿರಗಂಬಿಯವರು**

ಶಿಕ್ಷಕರು, ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ನಿಟ್ಟುವಳ್ಳಿ, ದಾವಣಗೆರೆ.

ನೀವು ನಮ್ಮನ್ನಗಲಿ ಇಂದಿಗೆ ಒಂದು ವರ್ಷವಾಯಿತು.
ಸದಾ ನಿಮ್ಮ ಸ್ಮರಣೆಯಲ್ಲಿರುವ...

ಶ್ರೀಮತಿ ಗೌರಮ್ಮ, ಶ್ರೀ ಎಸ್.ಆರ್ ಶಿರಗಂಬಿ,
ನಿವೃತ್ತ ಮುಖ್ಯೋಪಾಧ್ಯಾಯರು ಮತ್ತು ಮಕ್ಕಳು,
ಅಳಿಯಂದಿರು, ಮೊಮ್ಮಕ್ಕಳು ಹಾಗೂ ಬಂಧು-ಮಿತ್ರರು.
ತರಳಬಾಳು ಬಡಾವಣೆ, ದಾವಣಗೆರೆ.

## ಹುಟ್ಟುಹಬ್ಬದ ಶುಭಾಶಯಗಳು



**ಕಿರಣ್‌ಕುಮಾರ್ ಜೆ.**

ಬಿಜೆಪಿ ಯುವ ಮುಖಂಡರು ಹಾಗೂ
ಅಖಿಲ ಭಾರತ ಜಂಗಮ ಮಹಾಸಭಾ, ರಾಜ್ಯ ಸಂಘಟನಾ ಕಾರ್ಯದರ್ಶಿ
ಹಾಗೂ ಜಂಗಮ ಸೌಹಾರ್ದ ಸಹಕಾರಿ ನಿಯಮಿತ ನಿರ್ದೇಶಕರು
ಮತ್ತು ಎಸ್.ಎಂ.ಕೆ. ವಿವಿದೋದ್ದೇಶ ಸಂಸ್ಥೆ, ಕಾರ್ಯದರ್ಶಿ
ಇವರಿಗೆ ಜನ್ಮದಿನದ ಹಾರ್ದಿಕ ಶುಭಾಶಯಗಳು.

ಶುಭ ಕೋರುವವರು :
ಅಖಿಲ ಭಾರತ ಜಂಗಮ ಮಹಾಸಭಾದ
ಎಲ್ಲಾ ಸದಸ್ಯರುಗಳು, ಮತ್ತು ಜಂಗಮ ಸೌಹಾರ್ದ
ಸಹಕಾರಿ ನಿಯಮಿತ, ಸಿಬ್ಬಂದಿ ವರ್ಗ
ಎಲ್ಲಾ ಜಂಗಮ ಸಮಾಜದ ಮಿತ್ರ ವೃಂದ




ಸ್ಪರ್ಶ್ ಆಸ್ಪತ್ರೆ - ಬೆಂಗಳೂರು,
ಇಲ್ಲಿನ ಪ್ರಮುಖ ಮೂಳೆ ಹಾಗೂ ಕೀಲು ಶಸ್ತ್ರಚಿಕಿತ್ಸಕರು
ನಿಮ್ಮ ದಾವಣಗೆರೆಗೆ ಭೇಟಿ ನೀಡುತ್ತಾರೆ

ಡಾ. ರವಿಕುಮಾರ್ ಮುಕಾರ್ತಿಹಾಳ್
D'Ortho, DNB (Ortho), Fellowship in Arthroplasty (Depuy, SPARSH India), Fellowship in Septic & Aseptic Revision Joint Replacement surgery (EndoKlinik, Germany)
ಮೂಳೆ ಮತ್ತು ಕೀಲು ಮರುಜೋಡಣಾ ಶಸ್ತ್ರಚಿಕಿತ್ಸಕರು

- ಕೀಲು ನೋವು
- ಮೊಣಕಾಲು ನೋವು
- ಭುಜದ ನೋವು
- ಸ್ಪೋರ್ಟ್ಸ್ ಇಂಜುರೀಸ್
- ಕೀಲು ಮರುಜೋಡಣೆ
- ಹಿಪ್ ಮರುಜೋಡಣೆ
- ರಿವಿಷನ್ ಶಸ್ತ್ರಚಿಕಿತ್ಸೆ
- ಡಿಫಾರ್ಮಿಟಿ ಸರಿಪಡಿಸುವಿಕೆ

ಇತರೇ ಮೂಳೆ ಮತ್ತು ಕೀಲು ಸಮಸ್ಯೆಗೆ ಸಂಪರ್ಕಿಸಿ

ದಿನಾಂಕ: ಗುರುವಾರ, 4 ಮಾರ್ಚ್ 2021 ಸಮಯ: ಬೆಳಿಗ್ಗೆ 11ರಿಂದ ಮಧ್ಯಾಹ್ನ 2ರ ವರೆಗೆ

ಹೊರ ರೋಗಿಗಳ ಕ್ಲಿನಿಕ್ ವಿಳಾಸ: ಎಸ್. ಎಸ್. ಸ್ಪೆಷಾಲಿಟಿ ಕ್ಲಿನಿಕ್,
ಮೋದಿ ಕಾಂಪೌಂಡ್, ಎಂ.ಸಿ.ಸಿ. 'ಎ' ಬ್ಲಾಕ್, ಮೋತಿ ವೀರಪ್ಪ ಕಾಲೇಜು ಹತ್ತಿರ, ದಾವಣಗೆರೆ
ನೋಂದಣಿಗಾಗಿ ಕರೆಮಾಡಿ: 96869 29090
ಸ್ಪರ್ಶ್ ಆಸ್ಪತ್ರೆ ಎಲ್ಲಾ ಆರೋಗ್ಯ ವಿಮಾ(TPA) ಯೋಜನೆಯಡಿಯಲ್ಲಿ ಅಂಗೀಕೃತವಾಗಿದೆ




JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte